

# ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಹತ್ತೊಂಭತು

ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥
ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯ್ಯೆ ನಮಃ ॥
ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥

ಸೂಕ್ಷ್ಮಕ್ಕಿಂತಲೂ ಸೂಕ್ಷ್ಮ ಅತ್ಯಂತ । ಮಹತ್ತಿಗಿಂತಲೂ ಅತ್ಯಂತ ಮಹತ ।
ಹೀಗೆ ಆ ಬ್ರಹ್ಮಸ್ತಂಭ ಪರ್ಯಂತ । ವಸ್ತುಜಾತವೆಲ್ಲವೂ ಈ ಸಾಯಿಯೇ ॥ 1

ಇಂಥ ಈ ಸದ್ವಸ್ತುವನ್ನು । ಕೊಟ್ಟು ರಂಗರೂಪಾದಿ ಆಕಾರಗಳನು ।
ಈ ಚರ್ಮಚಕ್ಷುಗಳಿಂದ ನೋಡಬೇಕಿದನು । ಎಂದು ಅಂತರದಿ ಇಚ್ಛೆ ಉದಿಸಿತು ॥ 2

ಸೂರ್ಯನಿಗೆ ಕಡ್ಡಿ ಬತ್ತಿಗಳನ್ನು ಬೆಳಗುವರು । ಭಕ್ತಿ ಭಾವದಿಂದ ಸೂರ್ಯ ಪೂಜಕರು ।
ಇಲ್ಲವೇ ಬೆಲ್ಲದ ಗಣಪತಿಯನ್ನು ಮಾಡುವರು । ಅವನಿಗೆ ಬೆಲ್ಲದ ನೈವೇದ್ಯ ಗಾಣಪತ್ಯರು ಅರ್ಪಿಸುವರು ॥ 3

ಇಲ್ಲವೇ ಮಹಾರ್ಣವದೊಳಗಿಂದ । ನೀರು ತೆಗೆದುಕೊಂಡು ಬೊಗಸೆಯಿಂದ ।
ಅದಕೆ ಅರ್ಘ್ಯವನು ಅರ್ಪಿಸುವದ । ಸಕೃದ್ದರ್ಶನದಿ ಅನುಚಿತ ॥ 4

ಸೂರ್ಯ ಮತ್ತು ಸಿಂಧುಗಳದು । ಮಹಾಪ್ರಭಾವವಿರುವದು ।
ಆದರೆ ಅಲ್ಲಿ ಭಕ್ತಿ ಭಾವವನೇ ನೋಡುವದು । ಉಚಿತಾನುಚಿತಗಳಿಗೆಲ್ಲಿ ಸ್ಥಳ ಅಲ್ಲಿ ॥ 5

'ಸಮಾನ ಶೀಲೆ ವ್ಯಸನೇಷು ಸಖ್ಯಮ್' । ಇದೊಂದು ಇರುವದು ಸಾಮಾನ್ಯ ನಿಯಮ ।
ಆದರೂ ಈ ದೇಹಾತ್ಮ ಸಂಗಮ । ಆ ನಿಯಮಕ್ಕೆ ಅಪವಾದವಾಗಿರುವದು ॥ 6

ಸ್ವಭಾವದಲಿ ಇವೆರಡೂ ಭಿನ್ನ । ಆದರೂ ಇಬ್ಬರ ಸ್ನೇಹ ವಿಲಕ್ಷಣ ।
ಬಿಟ್ಟಿರಲಾರರು ಒಬ್ಬರೊಬ್ಬರನ । ಒಂದು ಕ್ಷಣವೂ ದೂರಿರಲಾರರು ॥ 7

ಈ ದೇಹವಾದರೂ ಇರುವದು ನಶ್ವರ । ಆತ್ಮವು ನಿರ್ವಿಕಾರ ಮತ್ತು ಅಕ್ಷರ ।
ಆದರೂ ಇಬ್ಬರ ಪ್ರೀತಿ ಅಪರಂಪಾರ । ಅದರಿಂದಲೇ ಈ ಸಂಸಾರ ಪರಿಭ್ರಮ ॥ 8

ಆತ್ಮವೇ ಶಕ್ತಿ ಮಹತ । ಅದಕಿಂತಲೂ ಸೂಕ್ಷ್ಮ ಅವ್ಯಾಕೃತ ।
ಅದೇ ಆಕಾರ ಪ್ರಕೃತಿ ಅವ್ಯಕ್ತ । ಮಾಯೆ ಎನ್ನುವರು ಅದಕ್ಕೇ ॥ 9

ಈ ಎಲ್ಲಕಿಂತಲೂ ಪುರುಷನು ಸೂಕ್ಷ್ಮ । ಅಲ್ಲಿಯೇ ಇಂದ್ರಿಯಾದಿಗಳಿಗೆ ಉಪರಮ ।
ಅದೇ ಅಂತಿಮ ಗತಿ ಪರಮ । ಶುದ್ಧ ಬ್ರಹ್ಮವೆಂಬುದು ಅದೇ ॥ 10

ಹೀಗೆ ಈ ಆತ್ಮವು ಸಂಸಾರಿ ಎಂದು । ಎನಿಸುವದು ಮಾಯಾಕರ್ಮಾನುಸಾರಿಯಿದೆಂದು ।
ಸ್ವಯಂ ನಿರ್ವಿಕಾರಿಯಾಗಿದ್ದು । ಸ್ಫಟಿಕದಂತೆ ನಿರ್ಲೇಪನು ॥ 11
ಸ್ಫಟಿಕವನು ಕೆಂಪು ಕಪ್ಪು ಹಳದಿ । ಕಾಣುವದು ಆಯಾ ಬಣ್ಣಗಳ ತೆರದಿ ।
ತಾನಿದ್ದುಕೊಂಡು ನಿರ್ವಿಕಾರದಿ । ಎಲ್ಲ ವಿಕಾರ ವಿರಹಿತನು ॥ 12

ಬಯಲಿನಲ್ಲಿಯ ಮೃಗಜಲದಂತೆ । ಶುಕ್ತಿಕಾಧಿಷ್ಠಿತ ಬೆಳ್ಳಿಯಂತೆ ।
ಇಲ್ಲವೇ ಭಾಸವಾಗುವದು ಹಾವಿನಂತೆ । ಹಗ್ಗದ ಸುರುಳಿಯನು ಕಂಡಾಗ ॥ 13

ಹಗ್ಗವನ್ನು ಸರ್ಪವೆನ್ನುವದು । ವಾಸ್ತವಿಕವಾಗಿ ಸರಿಯಲ್ಲ ಇದು ।
ಹಾಗೆಯೇ ಅಭಿಮಾನವು 'ನಾ ದೇಹ' ವೆಂಬುದ । ಮುಕ್ತನಿಗೆ ಮಿಥ್ಯಾ ಬಂಧನವಿದು ॥14

ದೇಹೇಂದ್ರಿಯ ಮನಃ ಪ್ರಾಣ । ಎಲ್ಲಿ ಇವೆಲ್ಲದರ ಅಭಿಮಾನ ।
ಅಲ್ಲಿ ಈ ಕರ್ತೃತ್ವ ಭೋಕ್ತೃತ್ವ ಪ್ರಮಾಣ । ಸುಖದುಃಖಗಳ ಜ್ಞಾನ ಅನಿವಾರ್ಯವು ॥ 16

ವಟದ ಬೀಜವು ಎಷ್ಟು ಚಿಕ್ಕದು । ಗರ್ಭದಿ ವಟವೃಕ್ಷದ ಶಕ್ತಿಯ ಹೊಂದಿರುವದು ।
ಅಗಣಿತ ಬೀಜಗಳ ವೃಕ್ಷವು ಹೊಂದಿರುವುದು । ವೃಕ್ಷ ಕೋಟಿಗಳು ಅದರಲ್ಲಿ ॥ 17

ಹೀಗೆ ಬೀಜಗಳಿದ್ದಷ್ಟು ವೃಕ್ಷ । ಆಪ್ರಲಯಾಂತ ಕೊಡುವವು ಸಾಕ್ಷ್ಯ ।
ಹೀಗೆಯೇ ವಿಶ್ವವೂ ಪ್ರತ್ಯಕ್ಷ । ಗಮನಿವಿಟ್ಟು ನೋಡಿರಿ ನೀವು ॥ 18

ಶಾಶ್ವತತೆ ನಿರ್ಭಯತೆ ಮುಕ್ತತೆ । ಸ್ವತಂತ್ರತೆ ಪರಮಾತ್ಮ ಪ್ರಾಪ್ತತೆ ।
ಇದೇ ಜೀವನದ ಸಾಫಲ್ಯತೆ । ಇತಿಕರ್ತವ್ಯತೆಯು ಜನ್ಮದ್ದು ॥ 19

ಜ್ಞಾನದ ಹೊರತು ಮೋಕ್ಷವಿಲ್ಲ । ವಿರಕ್ತಿಯ ಹೊರತು ಜ್ಞಾನವಿಲ್ಲ ।
ಎಲ್ಲಿಯವರೆಗೆ ಸಂಸಾರವು ಅನಿತ್ಯವೆನಿಸಿಲ್ಲ । ವಿರಕ್ತಿ ಭಾವನೆಯೇಬಾರದು ॥ 20

ಈ ಅನಿತ್ಯತ್ವದ ದಾರಿಯಲ್ಲಿ । ದೃಷ್ಟಿ ತೊಡಕುವದು ವಿಶ್ವಾಭಾಸದಲ್ಲಿ ।
ಅದರಿಂದ ಪಾಂಥಸ್ಥ ನಡುದಾರಿಯಲ್ಲಿ । ಮುಂದೆಲ್ಲಿಗೆಂಬದು ತಿಳಿಯದೇ ಒದ್ದಾಡುವನು ॥ 21

ಹೀಗೆ ಈ ವಿಶ್ವಾಭಾಸ । ಚಿನ್ಮಾತ್ರದಲಿ ಮಿಥ್ಯಾ ಮಾಯಾವಿಲಾಸ ।
ಪ್ರಪಂಚವೆಲ್ಲ ಸ್ವಪ್ನ ವಿನ್ಯಾಸ । ಅದಕಾಗಿ ವ್ಯರ್ಥ ಪ್ರಯಾಸವೇಕೆ ॥ 22

ಸ್ವಪ್ನ ಕಾಣುವಾಗ ಎಚ್ಚರಾಗಲು । ಸ್ವಪ್ನವು ಕಾಣದಂತಾಗುವದು ।
ಅದರಂತೆಯೇ ನಿಜ ಸ್ವರೂಪದಿ ಸ್ಥಿತನಿರಲು । ಪ್ರಪಂಚಾರ್ಥವು ಅವನಿಗೆ ತಿಳಿಯದು ॥ 23

ಆತ್ಮೈಕ್ಯ ವಿಜ್ಞಾನದ ಹೊರತು । ಆತ್ಮಯಾಥಾತ್ಮ್ಯ ಪ್ರಕಾಶನದ ಹೊರತು ।
ಹರಿಯಲು ಶೋಕ ಮೋಹಾದಿಗಳ ಕಟ್ಟು । ಬೇರೆ ಜಾಗೃತಿ ಎಂಬುದಿಲ್ಲ ॥ 24

ಎಲ್ಲಕಿಂತಲೂ ಶ್ರೇಷ್ಠವಾದ ಜ್ಞಾನ । ಉಪದೇಶಿಸುತ್ತಿದ್ದರು ಬಾಬಾ ರಾತ್ರಂದಿನ ।
ಆದರೂ ಭಕ್ತಿಮಾರ್ಗದ ಅವಲಂಬನ । ಹೇಳುತಿದ್ದರು ಸರ್ವಸಾಧಾರಣವಾಗಿ ॥ 25

ಜ್ಞಾನ ಮಾರ್ಗದ ಮಹಿತಿಯನು ಹೇಳುತಿದ್ದಾಗ್ಯೆ । ಆ ಮಾರ್ಗವು ರಾಮಫಲದ ಹಾಗೆ ।
ಭಕ್ತಿಮಾರ್ಗವು ಸೀತಾಫಲ ತಿಂದ ಹಾಗೆ । ಸ್ವಲ್ಪ ಸಾಧನದಿಂದ ರಸಮಧುರ ॥ 26

ಭಕ್ತಿಯು ಸೌಮ್ಯವಾದ ಸೀತಾಫಲ । ಜ್ಞಾನವು ಪರಿಪಕ್ವ ರಾಮಫಲ ।
ಒಂದಕ್ಕಿಂತ ಒಂದು ಮಧುರ ಫಲ । ಪರಿಮಳವೂ ಅದರಂತೆಯೇ ಮಧುರವು ॥ 27

ರಾಮಫಲದ ಒಳಗಿನ ಸಾರ । ಪಾಡಗಾಯಿಯ ತೆಗೆದು ಹಣ್ಣು ಮಾಡಿಸಲು ಉಗ್ರ ।
ಗಿಡದಲ್ಲಿಯೇ ಹಣ್ಣಾಗುವವರೆಗೆ ಕಾಯ್ವವರ । ಪಾಲಿಗೆ ಮಧುರ ಆ ಫಲವು ॥ 28

ರಾಮಫಲವು ರುಚಿ ಬಲು । ಹಣ್ಣಾಗುವವರೆಗೆ ಗಿಡದಲ್ಲಿಯೇ ಬಿಡಲು ।
ಉಗ್ರವಾಗಿರುವದು ಮೊದಲೇ ನೆಲಕೆ ಬೀಳಿಸಲು । ಗಿಡದಲಿ ಹಣ್ಣಾದರೆ ಬಲು ರುಚಿ ॥ 29

ಮೇಲಿಂದ ಮೇಲೆಯೇ ಹಣ್ಣಾಗಿಸಬಲ್ಲ । ಅವನೇ ಅದನು ಆಸ್ವಾದಿಸಬಲ್ಲ ।
ಸೀತಾಫಲಕೆ ಈ ಕಷ್ಟವಿಲ್ಲ । ಅಲ್ಪ ಗುಣದಿಂದಲೇ ಬಹು ಮುಖ್ಯ ॥ 30

ರಾಮಫಲಕೆ ಪತನಭಯವಿರುವಂತೆ । ಜ್ಞಾನಿಗೂ ಇಲ್ಲ ನಿರ್ಭಯತೆ ।
ಆಗದೇ ಒಂದಿಷ್ಟೂ ಅಲಕ್ಷತೆ । ಸಿದ್ಧಿ ವಿಜಯವ ಸಾಧಿಸಬೇಕು ॥ 31

ದಯಾಘನರಾದ ಸಾಯಿ ಅದಕೇ । ಹೆಚ್ಚಾಗಿ ತನ್ನ ಶಿಷ್ಯಗಣಕೆ ।
ಭಕ್ತಿ ಮತ್ತು ನಾಮಸ್ಮರಣಕೆ । ಪ್ರಾಶಸ್ತ್ಯವಿತ್ತು ವಿವರಿಸುತಿದ್ದರು ॥ 32

ಜ್ಞಾನಕ್ಕಿಂತ ಧ್ಯಾನವು ಶ್ರೇಷ್ಠ । ಹೀಗೆ ಅರ್ಜುನನಿಗೆ ಹೇಳಿದ ಭಗವಂತ ।
ಸಾಯಿಯೂ ಈ ಸಾಧನವನೇ ಹೇಳುತ । ಇದ್ದರು ಭಕ್ತ ಭವ ಬಂಧನ ಬಿಡಿಸಲು ॥ 33

ಇರಲಿ ಈ ವಿಷಯದ ಕಥೆಯನ್ನು । ಹೇಳುತ್ತ ಹಿಂದಿನಧ್ಯಾಯದಲಿ ಅಷ್ಟಕ್ಕೇ ನಿಲ್ಲಿಸಿದೆನು ।
ಅದನ್ನೇ ಇಲ್ಲಿ ಮುಂದುವರಿಸುವೆನು । ಶ್ರೋತೃಗಳು ಸಾದರದಿ ಕೇಳಬೇಕು ॥ 34

ವೃದ್ಧ ವಯಸ್ಸಿನ ಶಕ್ತಿ ಕ್ಷೀಣಿಸಿದ । ಮುದುಕಿ ಕುಳಿತಳು ಹಟದಿಂದ ।
ಮಂತ್ರ ಪಡೆಯಲು ಸಾಯಿಯಿಂದ । ಉಪವಾಸ ವ್ರತವ ಕೈಕೊಂಡಳು ॥ 35

ನೋಡಿ ಆ ವೃದ್ಧೆಯ ಸ್ಥಿತಿಯನು । ಮಾಧವರಾಯರು ಗಾಬರಿಯಾದನು ।
ಮಧ್ಯಸ್ಥಿಗಾಗಿ ಬಾಬಾರ ಬಳಿ ಹೋದನು । ಇಲ್ಲಿಯವರೆಗೆ ಕಥೆ ಬಂದಿತ್ತು ॥ 36

ಸಾಯಿ ಸಂಕಲ್ಪದ ವಿದ್ಯೋತಿ । ಬೆಳಗಿತು ಈ ಚರಿತ್ರಜ್ಯೋತಿ ।
ಮಾರ್ಗದರ್ಶಕವಾಗಲಿ ಅವರ ಜ್ಯೋತಿ । ಭಾವಾರ್ಥಿಗಳಿಗೆ ಮಾರ್ಗ ತೋರಲಿ ॥ 37

ಬಾಬಾರ ಆಜ್ಞೆಯಂತೆ । ಮಾಧವರಾಯರೂ ನನ್ನ ಜೊತೆ ।
ಆರಂಭಿಸಿದ ಈ ಸುಂದರ ಕಥೆ । ಅದನೇ ಮುಂದೆ ಸಾಗಿಸುವಾ ॥ 38

ಹೇಳಿದರು ನೋಡಿ ಮುದುಕಿಯ ನಿಗ್ರಹ । ಬಾಬಾ ಕೊಟ್ಟರವಳಿಗೆ ಅನುಗ್ರಹ ।
ಬಿಡಿಸಿ ಅವಳ ಮನದ ಆಗ್ರಹ । ಹೊಸ ತರದ ಕಥೆಯ ಮಾಡಿ ತೋರಿದರು ॥ 39

ಆಮೇಲೆ ಬಾಬಾ ಮಮತೆಯಿಂದ । ಕರೆದು ಅವಳನು ಮುಂದೆ ।
"ತಾಯಿ ನೀನೇಕೆ ಹಟ ಹಿಡಿದೆ ಹಾಗೆ । ನಿನಗೇನು ಸಾಯಬೇಕಾಗಿತ್ತೇ" ॥ 40

ಯಾರೇ ಪ್ರೌಢ ಸ್ತ್ರೀ ಬರಲಿ । ಕರೆಯುವರವಳನು ತಾಯಿ ಎನುತಲಿ ।
ಕರೆವರು ಕಾಕಾ, ಬಾಪೂ ಭಾಯಿ ಪುರುಷರಲಿ । ಮಧುರ ವಚನವೇ ಒಂದು ಚಮತ್ಕೃತಿ ॥ 41

ಹೇಗೆ ಪ್ರೇಮಮಯ ಅವರ ಅಂತರ । ಅಂತೆಯೇ ನುಡಿಯೂ ಮಧುರ ।
ದುಃಖಿದೀನ ದರಿದ್ರರ ಆಧಾರ । ದೀನ ದಯಾಳು ಆ ಸಾಯಿ ॥ 42

ಈ ರೀತಿ ಅವಳನ್ನು ಕರೆದು । ತಮ್ಮೆದುರು ಅವಳನ್ನು ಕೂಡ್ರಿಸಿಕೊಂಡು ।
ಗುಪ್ತ ಬೀಗದ ಕೈ ತಮ್ಮ ಗುರುತ್ವದ್ದು । ಅವಳ ಕೈಗೆ ಇತ್ತರು ॥ 43

ಮಾಡಲು ಭವಸಂತಾಪ ಶಮನ । ಭಕ್ತ ಚಕೋರರ ತೃಷಾಪನಯನ ।
ಮಳೆಗರೆದರು ಬಾಬಾ ಆಗಿ ಚಿದ್ಘನ । ಸ್ವಾನಂದ ಜೀವನವದ ಕುಡಿಯಿರಿ ॥ 44

ಎಂದರು ತಾಯೆ, ನಿಜ ಹೇಳು ನೀನೇಕೆ । ಇಷ್ಟೊಂದು ಕಷ್ಟ ಕೊಟ್ಟೆ ಈ ಜೀವಕ್ಕೆ ।
ನಾ ಕೇವಲ ಫಕೀರ ಬೇಡುವೆನು ಭಿಕ್ಷೆ । ನನ್ನೆಡೆ ನೀ ಮಮತೆಯಲಿ ನೋಡು ॥ 45

ನಿಜವಾಗಿಯೂ ನೀ ತಾಯಿ ನಾ ಮಗನಿರುವನು । ಇನ್ನು ನನ್ನೆಡೆಗೆ ಲಕ್ಷ ಕೊಡು ।
ನಾ ಹೇಳುವೆ ಮಾತು ನಿನಗೊಂದು । ಅದರಿಂದ ಪರಮ ಸುಖವಾದೀತು ॥ 46

ನೋಡು ನನಗೊಬ್ಬ ಗುರು ಇದ್ದ । ಕೃಪಾಸಾಗರನವ ಜ್ಞಾನಿ ದೊಡ್ಡ ।
ಅವನ ಸೇವೆ ಮಾಡಿ ಮಾಡಿ ದಣಿದೆ । ಆದರೂ ಕಿವಿ ಮಂತ್ರವ ಕೊಡಲೊಲ್ಲ ॥ 47

ಹೊಂದಿದ್ದೆ ಪ್ರಬಲವಾದ ಆಸೆಯನ್ನು । ಎಂದೂ ಬಿಡಬಾರದು ಇವನ ಬೆನ್ನು ।
ಇವನ ಮುಖದಿಂದಲೇ ಪಡೆಯಬೇಕು ಮಂತ್ರವನ್ನು । ಎಷ್ಟೇ ಕಷ್ಟವಾದರೂ ॥ 48

ಮೊದಲು ಅವನು ನನ್ನನು ಕಾಡಿದನು । ಎರಡೇ ದುಡ್ಡು ಬೇಡಿದನು ।
ಕೂಡಲೇ ನಾನದ ಕೊಟ್ಟು ಬಿಟ್ಟೆನು । ಮತ್ತು ಮಂತ್ರಾಕ್ಷರಕ್ಕಾಗಿ ಬಲು ಪ್ರಾರ್ಥಿಸಿದೆನು ॥ 49

ನನ್ನ ಗುರುವು ಪೂರ್ಣಕಾಮ । ಹೇಗೆನಬೇಕೆವನಿಗೆ ನಿಷ್ಕಾಮ ।
ಶಿಷ್ಯನಿಗೆ ಕೇಳುವನು ದಾಮ । ಎರಡೇ ದುಡ್ಡನ್ನಾದರೂ ॥ 50

ಹೀಗೆ ಶಂಕಿಸುವದು ಸರಿಯಲ್ಲ । ವ್ಯಾವಹಾರಿಕ ದುಡ್ಡಿನ ಕಾಮನೆ ಇದಲ್ಲ ।
ಇದು ಅವನ ಕಲ್ಪನೆಯೇ ಅಲ್ಲ । ಅವನಿಗೆ ದುಡ್ಡಿನಿಂದೇನಾಗಬೇಕು ॥ 51

ನಿಷ್ಠೆ ಮತ್ತು ಧೈರ್ಯ ಇವೆರಡು । ಬೇರಲ್ಲ ಇವೇ ಎರಡು ಅವ ಕೇಳಿದ ದುಡ್ಡು ।
ನಾನಾಗಲೇ ಕೊಟ್ಟು ಬಿಟ್ಟೆ ತೆಗೆದು । ಅದರಿಂದ ಪ್ರಸನ್ನನಾದ ಆ ಗುರುರಾಯ ॥ 52

ಧೈರ್ಯವೆಂದರೇನೇ ಸಹನೆಯಿಂದ ಕಾಯುವದು । ಕೈ ಬಿಡಬೇಡ ಅದನು ಎಂದೂ ।
ಕಂಗೆಟ್ಟಾಗ ಪ್ರಸಂಗ ಬಂದು । ಅದೇ ಆಚೆದಡ ಸೇರಿಸುವದು ॥ 53

ಪುರುಷರ ಪೌರುಷವೆಂದರೇ ಈ ನಿಧಾನತೆ । ಪರಿಹರಿಸುವದಿದು ಪಾಪ ತಾಪ ದೈನ್ಯತೆ ।
ಯುಕ್ತಿ ಪ್ರಯುಕ್ತಿಗಳಿಂದ ಆಪತ್ತು ದೂರಾಗಿಸುತ್ತೇ । ಭಯಭೀತಿಗಳನು ಬದಿಗೊತ್ತಿ ॥ 54

ನಿಧಾನತೆಯಂತೆ ಯಶದ ಪಾಲು । ಓಡಿ ಹೋಗುವವು ವಿಪತ್ತಿಗಳು ।
ಇಲ್ಲಿ ಅವಿಚಾರದ ಮುಳ್ಳು । ಯಾರಿಗೂ ಗೊತ್ತಿಲ್ಲ ॥ 55

ಸಬೂರಿಯು ಸದ್ಗುಣದ ಖಣಿ । ಸದ್ವಿಚಾರ ರಾಜನಿಗೆ ಇವಳು ರಾಣಿ ।
ನಿಷ್ಠೆ ಇವಳ ಖಾಸ ಭಗಿನಿ । ಜೀವ ಪ್ರಾಣರಿವರಿಬ್ಬರೂ ॥ 56

ಮಾನವನಿರಲು ಸಬೂರಿ ರಹಿತ । ಸ್ಥಿತಿ ಅವನದು ದೈನ್ಯ ಭರಿತ ।
ಪಂಡಿತನಿರಲಿ ಅಥವಾ ಗುಣವಂತ । ಇದು ಇಲ್ಲದ ಜೀವನವೇ ವ್ಯರ್ಥ ॥ 57

ಗುರುವಿದ್ದರೂ ಮಹಾ ಪ್ರಬಲ । ಅಪೇಕ್ಷಿಸುವನು ಶಿಷ್ಯ ಪ್ರಜ್ಞೆಯ ಕೇವಲ ।
ಗುರುಪದದಲಿ ನಿಷ್ಠೆ ಸಬಲ । ಧೈರ್ಯಬಲವೇ ಸಬೂರಿ ॥ 58

ಹೇಗೆ ಮಣಿ ಮತ್ತು ಕಲ್ಲು ಗುಂಡು । ಸಾಣೆ ಹಿಡಿಯಲು ಹೊಳೆಯುವವು ಎರಡೂ ।
ಆದರೂ ಕಲ್ಲು ಕಲ್ಲಾಗಿಯೇ ಉಳಿಯುವದು । ಮಣಿ ಮಾತ್ರ ತೇಜದಿಂದ ಮಿಂಚುವದು ॥ 59

ಒಂದೇ ಸಂಸ್ಕಾರಕೊಟ್ಟರೂ ಎರಡಕ್ಕೂ । ಕಲ್ಲಿಗೆ ಬಂದೀತೆ ಮಣಿಯ ಬೆಳಕು ।
ಕಲ್ಲು ನಿಜಗುಣದಂತೆ ನುಣುಪಾದರೆ ಸಾಕು । ಮಣಿ ಮಾತ್ರ ಸತೇಜ ವಜ್ರವಾಗುವದು ॥ 60

ಹನ್ನೆರಡು ವರ್ಷ ಹತ್ತಿರ ಇಟ್ಟುಕೊಂಡನು । ಗುರುವು ಸಾಕಿ ದೊಡ್ಡವನ ಮಾಡಿದನು ।
ಅನ್ನ ವಸ್ತ್ರಗಳಿಗೆ ಕೊರತೆ ಇರಲಿಲ್ಲವೇನೂ । ಅನಿವಾರ ಪ್ರೀತಿಯೂ ತುಂಬಿತ್ತು ॥ 61

ಭಕ್ತಿ ಪ್ರೇಮಗಳ ಪುತ್ಥಳಿಯಂತೆ । ಅವನಿಗೆ ಶಿಷ್ಯನ ಮೇಲೆ ನಿಜವಾದ ಮಮತೆ ।
ಅಪರೂಪಕ್ಕೆ ದೊರಕುವರು ನನ್ನ ಗುರುವಿನಂತೆ । ಆ ಸುಖವನೇನು ಬಣ್ಣಿಸಲಿ ॥ 62

ಏನು ಆ ಪ್ರೇಮದ ವರ್ಣನೆ ಎನಲು । ಮುಖ ನೋಡಿದರೆ ಧ್ಯಾನಸ್ಥ ನಯನಗಳು ।
ನಾವಿಬ್ಬರೂ ಆನಂದ ಘನರಿರಲು । ಅನ್ಯಾವಲೋಕನವ ಅರಿಯೆ ನಾನು ॥ 63

ಪ್ರೀತಿಯಿಂದ ಗುರುಮುಖಾವಲೋಕನ । ಮಾಡುತಿದ್ದೆ ನಾ ರಾತ್ರಂದಿನ ।
ಮರೆತುಬಿಟ್ಟಿದ್ದೆ ಹಸಿವೆ ನೀರಡಿಕೆಗಳನ । ಗುರುವಿನ ಹೊರತು ಮನ ಅಸ್ವಸ್ಥವಾಗುವದು ॥ 64

ಅವನ ಹೊರತು ಬೇರೆ ಧ್ಯಾನವಿಲ್ಲ । ಅವನ ಬಿಟ್ಟು ಬೇರೆ ಲಕ್ಷ್ಯವಿಲ್ಲ ।
ನಿತ್ಯ ಅನುಸಂಧಾನ ಅವನದೇ ಎಲ್ಲ । ವಿಚಿತ್ರ ಮಹಿಮೆ ಗುರುವಿನದು ॥ 65

ಇದೇ ಅಪೇಕ್ಷೆ ಇತ್ತು ನನ್ನ ಗುರುವಿನದು । ಇಚ್ಛಿಸಲಿಲ್ಲ ಇದಕಿಂತ ಬೇರೊಂದು ।
ಮಾಡಲಿಲ್ಲ ನನ್ನ ಉಪೇಕ್ಷೆಯನೆಂದೂ । ಸಂಕಟದಲಿ ರಕ್ಷಣೆ ಯಾವಾಗಲೂ ॥ 66

ಒಮ್ಮೊಮ್ಮೆ ಸ್ಥಳ ನನಗೆ ಚರಣದೆಡೆ । ಮತ್ತೊಮ್ಮೆ ಸಮುದ್ರದ ಆಚೆ ದಂಡೆ ।
ಆದರೂ ಸಂಗಮ ಸುಖವ ಅಂತರಿಸದೆ । ಕೃಪಾದೃಷ್ಟಿಯಿಂದ ನೋಡಿಕೊಳ್ಳುವರು ॥ 67

ಆಮೆಯು ತನ್ನ ಮರಿಗೆ । ನಿಜ ದೃಷ್ಟಿಯ ಆಹಾರನೀಯುವ ಹಾಗೆ ।
ನನ್ನ ಗುರುವಾದರೂ ಅದರ ಹಾಗೆ । ದೃಷ್ಟಿಯಿಂದ ಮಗುವ ಜೋಪಾನ ಮಾಡುವಳು ॥ 68

ಅಮ್ಮಾ ಕುಳಿತು ಈ ಮಶೀದಿಯಲ್ಲಿ । ಹೇಳುವೆನಿದನು ಪ್ರಮಾಣವೆಂದು ತಿಳಿ ।
ಗುರುಮಂತ್ರ ಊದಲಿಲ್ಲ ನನ್ನ ಕಿವಿಯಲ್ಲಿ । ನಾ ನಿನ್ನ ಕಿವಿಯಲೇನುಸುರಲಿ ॥ 69

ಆಮೆಯ ಆ ಪ್ರೇಮ ದೃಷ್ಟಿ । ಅದರಿಂದಲೇ ಮರಿಗೆ ಸುಖ ಸಂತುಷ್ಟಿ ।
ತಾಯಿ ಏತಕೆ ವ್ಯರ್ಥಪಟ್ಟಿ । ನಿಜವಾಗಿ ಉಪದೇಶದ ಮಾತು ನಾನರಿಯೆನು ॥ 70

ತಾಯೀ ಆಮೆ ನದಿಯ ಆ ದಡದಲ್ಲಿ । ಮರಿಗಳು ದೂರ ಮರಳಿನಲ್ಲಿ ।
ಪಾಲನೆ ಪೋಷಣೆ ದೃಷ್ಟಿ ಮಾತ್ರದಲ್ಲಿ । ಮಂತ್ರದ ಪ್ರಯತ್ನ ಎಲ್ಲ ಸುಳ್ಳು ॥ 71

ಅದಕೆ ಹೋಗಿನ್ನು ಊಟ ಮಾಡು । ಜೀವವ ಮಾಡಬೇಡ ಕಷ್ಟಕ್ಕೆ ಈಡು ।
ನನ್ನ ಕಡೆಗೆ ಮಾತ್ರ ಚಿತ್ತವಿಡು । ಪರಮಾರ್ಥವನ್ನು ಪಡೆಯುವಿ ಅದರಿಂದ ॥ 72

ಅನನ್ಯ ಭಾವದಿಂದ ನೀ ನೋಡು ನನ್ನೆಡೆಗೆ । ನಾನೂ ಹಾಗೇ ನೋಡುವೆ ನಿನ್ನ ಕಡೆಗೆ ।
ನನ್ನ ಗುರು ಬೇರೇನೂ ಕೊಡಲಿಲ್ಲ ನನಗೆ । ಎಂಥ ಶಿಕ್ಷಣವನೂ ಕೊಡಲಿಲ್ಲ ॥ 73

ಸಾಧನ ಸಂಪನ್ನತೆ ಬೇಕಿಲ್ಲ । ಷಟ್‌ಶಾಸ್ತ್ರ ಚಾತುರ್ಯತೆಯ ಅವಶ್ಯಕತೆಯಿಲ್ಲ ।
ಕರ್ತನೂ ಹರ್ತನೂ ಗುರುವೇ ಎಲ್ಲ । ಎಂಬ ಸಂಪೂರ್ಣ ನಂಬಿಕೆ ಇರಬೇಕು ॥ 74

ಅದಕೆ ಗುರುವಿನ ಮಹಿತಿ ದೊಡ್ಡದು । ಹರಿಹರಬ್ರಹ್ಮವೆಲ್ಲ ಗುರುವೆಂದು ।
ಇರುವನು ಹೀಗೆ ತಿಳಿದುಕೊಂಡು । ಮೂಲೋಕದಲಿ ಅವನೇ ಧನ್ಯನು" ॥ 75

ಈ ರೀತಿ ಮುದುಕಿಗೆ ಬೋಧಿಸಲು । ಆ ಕಥೆ ಅವಳ ಮನದಾಳಕೆ ಇಳಿಯಲು ।
ತಲೆ ಇಟ್ಟು ಮಹಾರಾಜರ ಚರಣದೊಳು । ವ್ರತನಿವೃತ್ತಿಯನು ಕೈ ಕೊಂಡಳು ॥ 76

ಕೇಳಿ ಸಂಪೂರ್ಣವಾಗಿ ಈ ಕಥೆಯನು । ಅರಿತು ಅದರ ಸಮರ್ಪಕತೆಯನು ।
ಮನದಲಿ ಸಾನಂದ ವಿಸ್ಮಿತನಾದೆನು । ಕಥೆಯ ಸಾರ್ಥಕತೆಯನು ನೋಡಿ ॥ 77

ಬಾಬಾರ ಈ ಲೀಲೆಯನು ಕಂಡು । ಪರಮಾನಂದದಿ ಕಂಠ ಬಿಗಿದು ।
ಪ್ರೆಮೋದ್ರೇಕದಿಂದ ಅಳು ಉಕ್ಕಿ ಬಂದು । ಅಂತರದಲಿ ಸದ್ಬೋಧದ ಅಚ್ಚೊತ್ತಿತು ॥ 78

ಕಂಠವು ಸಗದ್ಗದವಾದದ್ದು ಕಂಡು । ಮಾಧವರಾಯರು ನನಗೆಂದುದು ।
ಅಣ್ಣಾ ಸಾಹೇಬರೇ ಏನಿದು । ಸ್ತಬ್ಧರಾಗಿ ಕುಳಿತಿರೇಕೆ ॥ 79

ಅಗಣಿತ ಕಥೆಗಳು ಬಾಬಾರವು ಹೀಗೆ । ಎಷ್ಟೆಂದು ಹೇಳಲಿ ನಾ ನಿಮಗೆ ।
ಮಾಧವರಾಯರು ಹೀಗೆ ನುಡಿಯುತಿರುವಾಗ್ಯೆ । ಗಂಟೆ ನುಡಿಯತೊಡಗಿತು ॥ 80

ದಿನಾಲೂ ಮದ್ಯಾನ್ಹ ಊಟದ ಮೊದಲು । ಭಕ್ತರು ಹೋಗಿ ಮಶೀದಿಯೊಳು ।
ಇತ್ತು ಗಂಧಾಕ್ಷತೆ ಅರ್ಘ್ಯ ಪಾದ್ಯಾದಿಗಳು । ವಿಧಿಪೂರ್ವಕ ಪೂಜೆ ಮಾಡುವರು ಬಾಬಾರದು ॥ 81

ಆಮೇಲೆ ಪಂಚಾರತಿಯದು । ಬಾಪೂಸಾಹೇಬ ಜೋಗರಿಂದ ನಡೆಯುವದು ।
ಭಕ್ತಿ ಪ್ರೇಮದಿಂದ ಬೆಳಗುವದು । ಭಕ್ತ ಜನರ ಆರತಿ ಹಾಡಿನ ಜೊತೆ ॥ 82

ಇದು ಆ ಆರತಿಯ ನಿದರ್ಶಕವು । ಗಣಗಣ ಗಂಟೆಯ ನಾದವು ।
ಕೇಳಿ ನಾವೂ ಮಶೀದಿಗೆ ನಡೆದವು । ಮನದ ಶಂಕೆ ನಿವಾರಣೆಯಾಯಿತು ॥ 83

ಮದ್ಯಾನ್ಹ ಸಮಯದ ಆರತಿಯಿದು । ಸ್ತ್ರೀಪುರುಷರೆಲ್ಲರೂ ಕೂಡಿ ಮಾಡುವದು ।
ಸ್ತ್ರೀಯರು ಮೇಲೆ ಮಶೀದಿಯಲಿದ್ದು । ಪುರುಷರು ಕೆಳಗೆ ಮಂಟಪದಲಿ ॥ 84

ಮಂಗಲ ವಾದ್ಯಗಳು ನುಡಿಯುತಿರಲು । ತಾಸೇ ಬಜಂತ್ರಿಯು ಬಾರಿಸುತಿರಲು ।
ಆರತಿ ಹೇಳುವರು ಉಚ್ಚಸ್ವರಳು । ಹರ್ಷ ನಿರ್ಭರರಾಗಿ ಆಗ ॥ 85

ನಾವು ಮಂಟಪ ದ್ವಾರಕ್ಕೆ ಬರಲು । ಆರತಿ ನಡೆದಿತ್ತು ಘನಗಜರದೊಳು ।
ಗಂಡಸರಿಂದ ತುಂಬಿತ್ತು ಮೆಟ್ಟಿಲು । ಮೇಲೇರಿ ಹೋಗಲು ದಾರಿ ಇಲ್ಲ ॥ 86

ನನಗೆನಿಸಿತು ಇರಬೇಕಿಲ್ಲೇ ಕೆಳಗೆ । ಆರತಿಯೆಲ್ಲಾ ಮುಗಿಯುವವರೆಗೆ ।
ಮುಗಿದ ಬಳಿಕ ಬಾಬಾರ ಬಳಿಗೆ । ಜನರೆಲ್ಲರ ಜೊತೆ ಹೋಗಬೇಕೆಂದು ॥ 87

ಹೀಗೆ ನಾನೂ ಮನದಲೆಂದರೂ । ಮಾಧವರಾಯರು ಮೆಟ್ಟಿಲು ಹತ್ತಿದರು ।
ಕೈ ಹಿಡಿದು ನನ್ನನ್ನೂ ಎಳೆದರು । ಬಾಬಾರ ಹತ್ತಿರ ಕರೆದೊಯ್ದರು ॥ 88

ಬಾಬಾ ಸ್ವಸ್ಥಾನದಲಿ ಕುಳಿತಿದ್ದರು । ಸ್ವಸ್ಥ ಮನದಿಂದ ಚಿಲುಮೆ ಸೇದುತಿದ್ದರು ।
ಎದುರಿಗೆ ಜೋಗರು ಪಂಚಾರತಿ ಬೆಳಗುತಿದ್ದರು । ಎಡಗೈಲಿ ಗಂಟೆ ಬಾರಿಸುತಿದ್ದರು ॥ 89

ಆರತಿಯು ನಡೆದಿರುವಾಗ ಹೀಗೆ । ಮಾಧವರಾಯರು ಬಾಬಾರ ಬಲಗಡೆಗೆ ।
ತಾವೂ ಕುಳಿತು ನನ್ನನ್ನು ಕೂಡ್ರಿಸಿ ಕೆಳಗೆ । ಬಾಬಾರ ಕುಳಿತ ಸ್ಥಳದೆದುರಿಗೆ ॥ 90
ಆಮೇಲೆ ಶಾಂತ ಮೂರ್ತಿ ಸಂತಮಣಿವರರು । ಮಂಜುಳ ಸ್ವರದಲಿ ಬಾಬಾ ನುಡಿದರು ।
ಶಾಮರಾಯ ದಕ್ಷಿಣೆಯನೇನು ಕೊಟ್ಟರು । ಅದನು ನನಗೆ ಕೊಟ್ಟುಬಿಡು ॥ 91

ಬಾಬಾ ಈ ಶ್ಯಾಮರಾಯರು ಇಲ್ಲೇ ಇರುವರು । ದಕ್ಷಿಣೆಗೆ ಬದಲಾಗಿ ನಮಸ್ಕಾರಗಳ ಕೊಟ್ಟರು ।
ಇವೇ ಹದಿನೈದು ರೂಪಾಯಿಗಳೆಂದರು । ಇದನೇ ಬಾಬಾರಿಗೆ ಅರ್ಪಿಸು ॥ 92

ಹೋಗಲಿ ಅಲ್ಲಿ ಏನಾದರೂ ವಾರ್ತೆ ನಡೆಯಿತೇ । ನಿಮ್ಮಿಬ್ಬರಲಿ ಏನಾದರೂ ಮಾತು ನಡೆಯಿತೇ ।
ಏನು ಮಾತು ಆಡಿದಿರಂತೆ । ಎಲ್ಲವನ್ನೂ ಹೇಳು ನನಗೆ ॥ 93

ಇರಲಿ ನಮಸ್ಕಾರದ ಆ ಕಥೆ । ಅಲ್ಲಿ ಏನು ನಡೆಯಿತು ವಾರ್ತೆ ।
ಹೇಗೆ ಏನು ನಿಮ್ಮಲ್ಲಿ ನಡೆಯಿತು ಮಾತು ಕಥೆ । ಎಲ್ಲ ಸಮಗ್ರವಾಗಿ ಹೇಳು ನನಗೆ ॥ 94

ಕತೆ ಹೇಳಬೇಕೆಂಬ ಈ ಉತ್ಕಟ। ಅತ್ತ ಆರತಿಯ ದೊಡ್ಡ ಗಲಾಟೆ ।
ಪರಮಾನಂದವು ಹಿಡಿಸದೆ ಹೊಟ್ಟೆ । ತುಟಿಗಳೆಡೆಯಿಂದ ಹೊರ ಬರಬಯಸುತಿತ್ತು ॥ 95

ಬಾಬಾ ಕುಳಿತಿದ್ದರು ನೆಂಬಿ ತೆಕ್ಕೆಗೆ । ಮುಂದೆ ಬಾಗಿದರು ಕಥೆ ಕೇಳುವುದಕೆ ।
ನಾನೂ ಮುಖ ಚಾಚಿದೆ ಮುಂದಕೆ । ಆರಂಭಿಸಿದೆ ಕಥೆ ಹೇಳಲು ॥ 96

ಬಾಬಾ ಅಲ್ಲಿ ನಡೆದ ವಾರ್ತೆಗ್ಗಳು । ಎಲ್ಲವೂ ಸವಿ ಎನಿಸಲು ।
ಅದರಲಿ ಆ ಮುದುಕಿಯ ಕಥೆ ಬಲು । ಆಶ್ಚರ್ಯಕರವೆನಿಸಿತೆನಗೆ ॥ 97

ಹೇಳುತಿದ್ದಾಗ ಶಾಮರಾಯರು ಆ ಕಥೆ । ಅರಿವಾಯಿತಾಗ ತಮ್ಮ ಅಕಳತೆ ।
ನಿಮಿತ್ತ ಮಾತ್ರವಾಯಿತು ಆ ಕಥೆ । ಅದರಿಂದ ನನ್ನ ಮೇಲೆ ಅನುಗ್ರಹ ಮಾಡಿದಿರಿ ಖಚಿತ ॥ 98

ಆಗ ಬಾಬಾ ತೋರಿ ಅತಿ ಉತ್ಸುಕತೆ । ಎಂದರು ಹೇಳು ನನಗೆ ಸಮಗ್ರವಾಗಿ ಆ ಕಥೆ ।
ನೋಡುವಾ ಹೇಗೆ ಅದರಲ್ಲಿ ಇರುವದೆಂಥ ವಿಸ್ಮಯತೆ । ಅನುಗ್ರಹತೆಯದು ಎಂಥದು ॥ 99

ಕಥೆ ಅದೇ ಆಗ ಕೇಳಿದ್ದಿತ್ತು । ಅಲ್ಲದೇ ಮನಸಿನಲ್ಲಿ ಅತಿ ಬಿಂಬಿಸಿತ್ತು ।
ಬಾಬಾರೆದುರು ಅಸ್ಖಲಿತ ನಿವೇದನೆಯಾಯಿತು । ಅವರ ಚಿತ್ತವೃತ್ತಿಯೂ ಪ್ರಸನ್ನವಾದಂತೆ ಕಂಡಿತು ॥ 100

ಹೀಗೆ ಹೇಳಿದೆನೆಲ್ಲ ನಡೆದ ವೃತ್ತಾಂತ । ಬಾಬಾರೂ ಚಿತ್ತಗೊಟ್ಟು ಅದನು ಕೇಳುತ ।
ಕೂಡಲೇ ನನಗೆ ಹೇಳುತ । ಇದನು ನೆನಪಿನಲ್ಲಿಟ್ಟುಕೊಂಡಿರಬೇಕು ಸದಾ ॥ 101

ಮತ್ತೆ ಅತಿ ಉಲ್ಲಸಿತರಾಗಿ ಕೇಳುತ । ಎಂಥ ಸವಿಯಾದದ್ದು ಈ ಕಥೆ ।
ನಿಜವಾಗಿಯೂ ನಿನಗದು ಹಿಡಿಸಿತೇ । ಕೇಳಿ ಸಾರ್ಥಕತೆ ಎನಿಸಿತೇ ॥ 102

ಬಾಬಾ ಕೇಳಿ ಈ ಕಥೆಯನಿಂತು । ನಿಜ ವಿಶ್ರಾಂತಿ ನನಗೆ ಲಭಿಸಿತು ।
ನನ್ನ ಮನದಭೀಷ್ಟ ಪೂರೈಸಿತು । ನಿಶ್ಚಿತ ಮಾರ್ಗ ತಿಳಿಯಿತೆನಗೆ ॥ 103

ಬಳಿಕ ಆಡಿದ ಬಾಬಾರ ನುಡಿ । "ನಮ್ಮ ರೀತಿಯೇ ಬೇರೆ ನೋಡಿ ।
ಈ ಒಂದು ಮಾತನು ನೆನಪಿನಲಿಡಿ । ಬಹಳ ಉಪಕಾರಕವಿರುವದದು ॥ 104

ಆತ್ಮದ ಸಮ್ಯಗ್‌ವಿಜ್ಞಾನ । ಸಮಗ್ವಿಜ್ಞಾನಕ್ಕಾಗಿ ಧ್ಯಾನ ।
ಆ ಧ್ಯಾನವೇ ಆತ್ಮಾನುಷ್ಠಾನ । ಅದರಿಂದಲೇ ವೃತ್ತಿಯ ಸಮಾಧಾನ ॥ 105

ಆಗಿ ಸರ್ವೇಕ್ಷಣ ನಿರ್ಮುಕ್ತನು । ನೆನಪಿಗೆ ತಂದು ಸರ್ವಭೂತಸ್ಥನನು ।
ಸರಿಯಾಗಿ ನಡೆಸಲು ಧ್ಯಾನವನು । ಪ್ರಾಪ್ತವ್ಯವು ಪ್ರಾಪ್ತವಾದೀತು ॥ 106

ಕೇವಲ ಮೂರ್ತದ ಜ್ಞಾನ । ಚೈತನ್ಯ ಅಥವಾ ಆನಂದಘನ ।
ತಿಳಿಯಬೇಕು ನನ್ನ ಸ್ವರೂಪ ಅದೇ ಎಂಬುದನ । ಅದರದೇ ನಿತ್ಯ ಧ್ಯಾನ್ಯ ಮಾಡುತ್ತಿರು ॥ 107

ಇಂಥ ಧ್ಯಾನವು ಸರಿ ಹೋಗದಿದ್ದರೂ । ಮಾಡಬೇಕು ಸಗುಣ ರೂಪ ಸಂಧಾನವೇನಾದರೂ ।
ಸಂಪೂರ್ಣ ಸಗುಣನಾದ ನನ್ನನು ಮನದೆದುರು । ಹಗಲು ರಾತ್ರಿ ತರಬೇಕು ॥ 108

ಹೀಗೆ ಮಾಡಲು ನನ್ನ ಧ್ಯಾನ । ವೃತ್ತಿಯಾಗುವದು ಏಕತಾನ ।
ಧ್ಯಾತಾ-ಧ್ಯಾನ-ಧ್ಯೆಯವೆಂಬುದನ । ನಷ್ಟಗೊಳಿಸಿ ಬಿಡುವದದು ॥ 109

ಈ ರೀತಿ ತ್ರಿಪುಟಿಗಳು ವಿಲೀನಗೊಳ್ಳಲು । ಧ್ಯಾತನು ಚೈತನ್ಯ ಘನತೆಯ ಪಡೆಯಲು ।
ಇದೇ ಧ್ಯಾನದ ಇತಿಕರ್ತವ್ಯತೆಯಾಗಿರಲು । ಬ್ರಹ್ಮಸಮರಸತೆಯ ಹೊಂದುವಿ ॥ 110

ತಾಯಿ ಆಮೆಯು ನದಿಯ ಆ ದಂಡೆಗೆ । ಅದರ ಮರಿಗಳು ಈ ದಂಡೆಗೆ ।
ಕಾವಿಲ್ಲ, ಹಾಲಿಲ್ಲ ಕೇವಲ ದೃಷ್ಟಿ ಅವುಗಳೆಡೆಗೆ । ಮಕ್ಕಳ ಪೋಷಣೆ ಅದರಿಂದ ॥ 111

ಮರಿಗೆ ತಾಯಿಯ ಧ್ಯಾನ ಸದಾಕಾಲ । ಇನ್ನೇನೂ ಮಾಡುವದು ಬೇಕಿಲ್ಲ ।
ಹಾಲು ಅನ್ನ ತಿಂಡಿ ಒಂದೂ ಬೇಕಿಲ್ಲ । ಮಾತೆಯ ನಿರೀಕ್ಷಣೆ ಮಾತ್ರದಿಂದ ಪೋಷಣೆ ॥ 112

ಈ ತರದ ನಿರೀಕ್ಷಣೆ ಕೂರ್ಮದೃಷ್ಟಿ । ಇದಿರುವದು ಪ್ರತ್ಯಕ್ಷ ಅಮೃತವೃಷ್ಟಿ ।
ಮರಿಗೆ ಸಿಗುವುದು ಸ್ವಾನಂದ ಪುಷ್ಟಿ । ಐಕ್ಯ ಸೃಷ್ಟಿ ಇದು ಗುರು ಶಿಷ್ಯರದು" ॥ 113

ಮುಗಿಯಲು ಸಾಯಿ ಮುಖದ ಈ ಮಾತು । ಆರತಿಯ ಗಲಾಟೆಯೂ ಮುಗಿಯಿತು ।
ಜನ "ಶ್ರೀ ಸಚ್ಚಿದಾನಂದ ಸದ್ಗುರು ಮಹಾರಾಜಕೀ ಜಯ ಎಂದಿತು । ಸಂತೋಷಭರಿತರಾಗಿ ಆಗ ॥ 114

ನಿರಾಂಜನೋಪಚಾರ ಮುಗಿಯಿತು । ಸವಿಸ್ತರ ಆರತಿಯೂ ಮುಗಿಯಿತು ।
ಜೋಗರಿಂದ ಕಲ್ಲು ಸಕ್ಕರೆ ಸಮರ್ಪಣೆಯಾಯಿತು । ಬಾಬಾ ಅಂಗೈ ಮುಂದೆ ಚಾಚಿದರು ॥ 115

ಅದರಲ್ಲಿ ನಿತ್ಯಕ್ರಮವನನುಸರಿಸಿ । ಕಲ್ಲು ಸಕ್ಕರೆ ಹಾಕಿದರು ಒಂದು ಬೊಗಸೆ ।
ಜೋಗರು ಬಾಬಾರಿಗೆ ನಮಸ್ಕರಿಸಿ । ನಿಂತರು ಪ್ರೇಮ ಪುರಃಸರವಾಗಿ ಅಲ್ಲಿ ॥ 116
ಬಾಬಾ ಆ ಎಲ್ಲ ಸಕ್ಕರೆಯನು ತಂದು । ನುಡಿದರು ಅದನು ನನ್ನ ಕೈಗೆ ಸುರಿದು ।
ಯಾವಾಗಲೂ ಇದ ನೆನಪಿಡುವದು । ಅದರಿಂದ ಈ ಸಕ್ಕರೆಯಂತಾದೀತು ನಿನ್ನ ಸ್ಥಿತಿ ॥ 117

ಈ ಕಲ್ಲು ಸಕ್ಕರೆಯು ಸಿಹಿ ಹೇಗೆ । ನಿನ್ನ ಮನದಿಚ್ಛೆ ಪೂರೈಸುವದು ಹಾಗೆ ।
ಚೊಕ್ಕಟ ಕಲ್ಯಾಣವಾಗುವದು ನಿನಗೆ । ಅಂತರಂಗದ ಅಭೀಷ್ಟ ಪಡೆಯುವೆ ॥ 118

ಆಮೇಲೆ ನಾ ಅಭಿವಂದಿಸಿ ಬಾಬಾರನು । ಬೇಡಿದೆ ಇದೇ ಕೃಪಾದಾನವನು ।
ಈ ಆಶೀರ್ವಚನವೇ ಸಾಕು ನನ್ನನ್ನು । ನೀವೆ ಸಂಭಾಳಿಸಬೇಕು ॥ 119

ಬಾಬಾ ಎಂದರು ಕಥಾ ಶ್ರವಣ । ಮಾಡಬೇಕು ಮನನ ಮತ್ತು ನಿಧಿ ಧ್ಯಾಸನ ।
ಆಗಲು ಸ್ಮರಣೆ ಮತ್ತು ಧ್ಯಾನ । ಆನಂದ ಘನ ಪ್ರಕಟವಾದೀತು ॥ 120
ಈ ರೀತಿ ಕಿವಿಯಿಂದ ಕೇಳಿದ್ದನ್ನು । ಮನಸಿನಲಿ ಹಿಡಿದರೆ ನೀನು ।
ಹೊಂದುವೆ ನಿಜ ಕಲ್ಯಾಣದ ಖಣಿಯನು । ಪಾಪಗಳೆಲ್ಲ ಸುಟ್ಟು ಹೋಗುವವು ॥121

ಗಾಳಿಯು ಭರದಿಂದ ಬೀಸತೊಡಗಲು । ಸಮುದ್ರದ ಮೇಲೆಳುವವು ತೆರೆಗಳು ।
ಅಸಂಖ್ಯ ಬುರುಗಿನ ಗುಳ್ಳೆಗಳು । ದಂಡೆಗೆ ಬಂದು ಅಪ್ಪಳಿಸುವವು ॥ 122
ತೆರೆಗಳು, ಗುಳ್ಳೆ, ಬುರುಗು, ತಿರುಗಣಿಗಳು । ಎಲ್ಲ ಒಂದೇ ನೀರಿನ ಪ್ರಾಕಾರಗಳು ।
ಇವೆಲ್ಲ ದೃಗ್‌ಭ್ರಮೆಯ ದೃಶ್ಯಗಳು । ಗಾಳಿಶಾಂತವಾಗುವವರೆಗೆ ಮಾತ್ರ ॥ 123
ಈಗಾದ ಪ್ರಕಾರಕ್ಕೆನೆನಬೇಕು । ಅಥವಾ ಎಲ್ಲ ನಾಶವಾಯಿತೆನಬೇಕು ।
ಮಾಯೇಯದೇ ಇದೆಲ್ಲ ಕಾರ್ಯವೆಂದರಿಯಬೇಕು । ಆದದ್ದು ಹೋದದ್ದು ಎಲ್ಲ ಅಷ್ಟೇ ॥ 124
ಸೃಷ್ಟಿಯ ಆಗು ಹೋಗುಗಳೆಲ್ಲ ಇದೇ ರೀತಿ । ವಿವೇಕಿಗಳಿಗಿಲ್ಲದರ ಚಿಂತೆ ।
ಈ ನಶಿಸಿ ಹೋಗುವುದರಲ್ಲಿಲ್ಲ ಅವರ ಪ್ರೀತಿ । ನಿತ್ಯದ ಸಂಗವ ಬೆಳೆಸುವವರು॥ 125

ಜ್ಞಾನಕ್ಕಿಂತ ಧ್ಯಾನವು ದೊಡ್ಡದ್ದು । ಅದಕೆ ಯಥಾರ್ಥ ಜ್ಞಾನ ಬೇಕಾಗುವದು ।
ಸಾದ್ಯಂತ ಅಕಲನವಾಗದೇ ಆ ವಸ್ತುವಿನದು । ಯಥಾರ್ಥಧ್ಯಾನವು ಸಾಧಿಸಾದು ॥ 126
ಸಮ್ಯಗ್ ಜ್ಞಾನವೇ ಮೂಲಧ್ಯಾನ । ಇದಕ್ಕೆನ್ನುವರು ಪ್ರತ್ಯಗಾತ್ಮಾನುಷ್ಠಾನ ।
ಆದರೂ ವಿಕ್ರಿಯಾರಹಿತನಿರುವವನ । ಧ್ಯಾನದಲಿ ಹೇಗೆ ತರಬೇಕು ॥ 127

ಪ್ರತ್ಯಾಗಾತ್ಮನೇ ಈಶ್ವರನು । ಮತ್ತು ಆ ಈಶ್ವರನೇ ಗುರು ಇಹನು ।
ಮೂರರಲಿ ಅಣುಮಾತ್ರ ಭೇದವನು । ಮಾಡಲಿವನೇನೂ ಪಡೆಯನು ॥ 128

ನಿಧಿಧ್ಯಾಸವು ಪರಿಪಕ್ವವಾಗಲು । ಧ್ಯಾನಧ್ಯಾತರು ಕರಗಿ ಒಂದಾಗಲು ।
ಚಿತ್ತವು ನಿರ್ವಾತದೀಪದೊಲು । ಶಾಂತವಾಗಲದೇ ಸಮಾಧಿ ॥ 129

ಆಗಿ ಸರ್ವೇಕ್ಷಣಾವಿನಿರ್ಮುಕ್ತನು । ತಿಳಿದುಕೊಂಡಿರಬೇಕು ಸರ್ವಭೂತಸ್ಥನನು ।
ಅದ್ವಿತೀಯದಿಂದ ಪಡೆಯಲು ಅಭಯವನು । ಆಮೇಲೆ ಧ್ಯಾನಕೆ ತಲುಪುವನು ॥ 130

ಅದರಿಂದ ಅವಿದ್ಯಾಕೃತ ಕರ್ಮಬಂಧ । ತಟತಟನೆ ಹರಿಯುವವು ಅವುಗಳ ಸಂಬಂಧ ।
ಬಿಡುಗಡೆಯಾಗುವುದು ವಿಧಿನಿಷೇಧಗಳು ನಿರ್ಬಂಧ । ಮುಕ್ತಿ ಆನಂದವನು ಭೋಗಿಸುವರು ॥ 131

ಆತ್ಮವು ಇದೆಯೋ ಇಲ್ಲವೋ ಎಂಬುವುದನು ಮೊದಲು । ಅದ್ವೈತವೋ ಬೇರೆ ಬೇರೆಯಾಗಿ ಅಲ್ಲಲ್ಲೋ ।
ಕರ್ತವೋ ಅಕರ್ತವೋ ತಿಳಿಯಲು । ಆರು ಶಾಸ್ತ್ರಗಳ ಹುಡುಕಬೇಕು ॥ 132

ಆತ್ಮೈಕ ವಿಜ್ಞಾನವೇ ಇರುವುದು । ಪರಾಕಾಷ್ಠೆ ಜ್ಞಾನದ್ದು ।
ಮೋಕ್ಷ ಮತ್ತು ಪರಮಾನಂದಗಳದು । ಉತ್ಪತ್ತಿ ನಿಜದಲಿ ಅಲ್ಲಿಂದಲೇ ॥ 133

ಕುರುಡರಿಗೆ ಆನೆಯ ಆಕಾರದ ಬಗ್ಗೆ ತಿಳಿಸಲು ।ಬೃಹಸ್ಪತಿ ಸಮಾನಾದ ಜಾಣನನು ತರಲು ।
ವಕ್ತೃತ್ವದಿಂದಬಾರದು ಸ್ವರೂಪವ ತಿಳಿಯಲು । ವಾಚ್ಯಾತೀತನನು ವರ್ಣಿಸಲು ಸಾಧ್ಯಯಿಲ್ಲ॥ 134

ವಕ್ತೃವಿನ ವಕ್ತೃ ಇಲ್ಲವೇ ಶ್ರೋತೃವಿನ ಶ್ರೋತೃ । ತರಬಹುದೇ ಎಂದಾದರೂ ಕಳೆದ ನೇತ್ರ ।
ಹಸ್ತಿ ಸ್ವರೂಪಾವಲೋಕನ ಪಾತ್ರ । ನೇತ್ರಗಳು ಮಾತ್ರ ನಿಜದಲಿ ॥ 135

ಹೇಗೆ ಸಾಧ್ಯ ನೇತ್ರಗಳಿಲ್ಲದಿರಲೂ । ಕುರುಡನಿಗೆ ಆನೆಯ ಪ್ರತೀತಿ ಬರಲು ।
ಹಾಗೆ ದಿವ್ಯ ನೇತ್ರಗಳ ಗುರು ಈಯಲು । ಜ್ಞಾನ ಸಂವಿತ್ತಿ ಆಗಲೇ ಸಾಧ್ಯ ॥ 136

ಸಾಯಿ ಸ್ವರೂಪದ ಯಥಾರ್ಥಜ್ಞಾನ । ತಾನೇ ಪರಿಪೂರ್ಣ ವಿಜ್ಞಾನಘನನಾದವನ ।
ಅವನ ಧ್ಯಾನ ಮತ್ತು ಅನುಷ್ಠಾನ । ಇದೇ ದರ್ಶನ ಅವನದು 137

ಅವಿದ್ಯಾ ಕಾಮ-ಕರ್ಮ-ಬಂಧನ । ಇವುಗಳಿಂದಾಗಲು ಸಂಪೂರ್ಣ ವಿಮೋಚನ ।
ಇಲ್ಲ ಇಲ್ಲ ಅನ್ಯ ಸಾಧನ । ಎಂಬುದನ್ನು ಸೆರಗಿಗೆ ಗಂಟು ಕಟ್ಟಿದೆ ॥ 138

ಸಾಯಿ ಅಲ್ಲ ನಮ್ಮವನು ನಿಮ್ಮವನು । ಅವನಂತೂ ಸರ್ವಭೂತಸ್ಥನಾಗಿರುವನು ।
ಸೂರ್ಯನು ಹೇಗೆ ಎಲ್ಲ ಜಗದವನು । ಇವನಾದರೂ ಅದರಂತೆಯೇ ॥ 139

ಇನ್ನು ಕೇಳಿರಿ ಅವರ ಮಾತು । ಸಾಧಾರಣವಾಗಿದ್ದರೂ ಬೆಲೆ ಕಟ್ಟದಷ್ಟು ।
ಆಗಾಗ್ಗೆ ಸ್ಮರಿಸುತಿರಲಿಂತೂ । ಯಾವಾಗಲೂ ಸಫಲ ಸ್ವಾರ್ಥವು ॥ 140

"ಇಲ್ಲದೆಯೆ ಸಂಬಂಧ ಏನೇನೂ । ಯಾರೂ ಎಲ್ಲಿಯೂ ಹೋಗಲಾರನು ।
ಮನುಷ್ಯರೇನೇನು ಪಶು ಪಕ್ಷಿಗಳನೂ । ತುಚ್ಛೀಕರಿಸಬಾರದು ಯಾರನ್ನು ॥ 141

ಒಂದು ಹೋಗುವವರ ಆದರಿಸಲು । ತೃಷಿಕರಿಗೆ ಜಲ ಹಸಿದವಗನ್ನವೀಯಲು ।
ಬರಿ ಮೈಗೆ ವಸ್ತ್ರಕುಳಿತುಕೊಳ್ಳಲು ನೆರಳು । ಕೊಡಲು ಶ್ರೀಹರಿ ಸಂತುಷ್ಟನಾಗುವನು ॥ 142

ಯಾರಿಗಾದರೂ ಹಣಬೇಕಾಗಿರಬಹುದು । ನಿನಗೆನಿಸಿದೆ ಹೇಗೆ ಕೊಡುವುದು ।
ಕೊಡಬೇಡ ಬಿಡು ಆದರೂ ಅವನ ಕಂಡು । ನಾಯಿಯಂತೆ ಹರಿಹಾಯಯಬೇಡ ॥ 143

ಯಾರೇ ನೂರು ಕಟು ಮಾತಾಡಿದರೂ । ನೀನು ಮಾತ್ರ ಕಟು ಉತ್ತರ ಕೊಡದಿರು ।
ಯಾವಾಗಲೂ ಸಹಿಷ್ಣುತೆ ತಾಳಿರ । ಅಪಾರ ಸುಖವದರಿಂದ ಲಭಿಸಿತು ॥ 144

ಆಕಡೆಯದೀಕಡೆ ಸರಿಯಾದರೂ ಜಗವಿದು । ತಾವು ಹಿಂದು ಮುಂದಾರರು ।
ನಿಶ್ಚಿಲರಾಗಿ ನಿಂತಲ್ಲಿಯೇ ನಿಂತದ್ದು । ಕೌತುಕವನು ಮಾತ್ರ ನೋಡುತಿರಬೇಕು ॥145

ನಮ್ಮ ನಿಮ್ಮ ನಡುವಿನ ಗೋಡೆ । ಕೆಡವಿ ನೋಡಿದರೆ ಎಲ್ಲೆಡೆ ।
ಬರು ಹೋಗಲು ಮಾರ್ಗ ಪ್ರಶಸ್ತವಾಗಿದೆ । ಒಂದಿಷ್ಟು ಅಳುಕಿಲ್ಲದಾದೀತು ॥ 3146

ನಾನು ನೀನೆಂಬ ಭೇದ ವೃತ್ತಿಯನು । ಗುರುಶಿಷ್ಯರ ನಡುವಿನ ಈ ಅಡ್ಡ ಗೋಡೆಯನು ।
ಕೆಡವಿ ಇಡದೆ ನಿಶ್ಚಿತವಾಗಿ ಅದನು । ಅಭೇದ ಸ್ಥಿತಿಯು ದುರ್ಗಮ ॥ 147

'ಅಲ್ಲಾ -ಮಾಲಿಕ- ಅಲ್ಲಾ ಮಾಲಿಕ' ಎನ್ನು । ಬೇರೆ ತ್ರಾತನಿಲ್ಲ ಬಿಟ್ಟು ಅವನನು ।
ಅವನ ಕೃರ್ತತ್ವ ಅಲೌಕಿಕವಿರುವದು । ಅಮೂಲ್ಯ ಮತ್ತು ಅಗಾಧವಾಗಿರುವುದು ॥ 148

ಅವನು ಮಾಡಿದ್ದೇ ಆಗುವುದು । ಅವನ ಮಾರ್ಗವ ಅವನೇ ತೋರುವುದು ।
ಕ್ಷಣದ ವಿಲಂಬವಿಲ್ಲದೇ ಸಮಯ ಬರುವುದು । ಮನದ ಭೀಷ್ಟ ಪೂರೈಸುವುದು ॥ 149

ಋಣಾನುಬಂಧವಿರುವುವದೆಂದು । ಭಾಗ್ಯವಶದಿ ನಮ್ಮ ನಿಮ್ಮ ಭೇಟ್ಟಿಯಾಗಿರುವುದು ।
ಪರಸ್ಪರ ಪ್ರೀತ್ಯಾದರಗಳಿಂದಿದ್ದು । ಸುಖ ಸಂತುಷ್ಟಿಗಳ ಅನುಭವಿಸುವಾ ॥ 150

ಇಲ್ಲಿ ಯಾರೂ ಅಮರರಾಗಿರುವರು । ಪರಮಾರ್ಥವ ಪಡೆದವರೇ ಕೃತಾರ್ಥರು ।
ಇಲ್ಲದಿರೆ ಶ್ವಾಸೋಚ್ಛ್ವಾಸ ಮಾಡುವರು । ಜೀವದಿಂದಿರುವರೆಗೆ ಮಾತ್ರ ॥ 151

ಕಿವಿಗೆ ಬೀಳಲು ಕೃಪಾವಚನವಿಂತು । ನನ್ನ ಆತುರ ಮನವು ಸುಖಿಸಿತು ।
ತೃಷಾರ್ತನೆನಗೆ ಜೀವನ ದೊರಕಿತು । ಆನಂದ ಸಂಪನ್ನನಾದೆನು ॥ 152

ಅತುಲ ಪ್ರಜ್ಞೆಯ ಜೋಡಿರಲು । ಅಂತೆಯೇ ದೃಢವಾದ ಶ್ರದ್ಧೆ ಇರಲು ।
ಸಾಯಿಯಂಥ ಗುರುಬಲ ಪಡೆಯಲು । ದೈವವೇ ಸಬಲವಾಗಿರಬೇಕು ॥ 153

ಇದರ ಸಾರಾಂಶವ ತಿಳಿದು ನೋಡಲು । ಭಗವಂತನೇ ನುಡಿದದ್ದೇ ನಿರ್ಧಾರವಿರಲು ।
'ಯೇ ಯಥಾ ಮಾಂ'ಉದ್ಗಾರದೊಲು । ಕರ್ಮದ ಮೇಲೆಯೇ ಎಲ್ಲ ಭಾರ ॥ 154

ಯಥಾಕರ್ಮ ಯಥಾಶ್ರುತ । ಅಭ್ಯಾಸದಂತೇಯೇ ಆಗುವದು ಹಿತ ।
ಇದೇ ಈ ಅಧ್ಯಾಯನದ ಇಂಗಿತ । ಇದೇ ಬೋಧಾಮೃತವಿಲ್ಲಿಯದು ॥ 155

'ಅನನ್ಯಾಶ್ಚಿಂತಯಂತೋ ಮಾಮ' । ಇಂಥ ನಿತ್ಯಯುಕ್ತರ ಯೋಗ ಕ್ಷೇಮ ।
ಇದೇ ಭಗವದ್ಗೀತೆಯ ಮರ್ಮ । ನಡೆಸಿಕೊಡುವವನಿದ ಗೋವಿಂದ ॥ 156

ಕೇಳಿ ಈ ಮಧುರ ಉಪದೇಶವನ್ನು । ನೆನಪಾಗುವುದು ಸ್ಮೃತಿವಚನ ।
"ದೇವಾನ್ ಭಾವಯತಾನೇನ" । ಆಗ ನಿನಗಾಗಿ ಕಳವಳಿ ಬರುವದವರಿಗೆ ॥ 157

ನೀನು ವ್ಯಾಯಾಮ ಮಾಡಲು ಸುರುಮಾಡು । ಹಾಲಿನ ಚಿಂತೆಯನೆಲ್ಲ ಬಿಟ್ಟು ಬಿಡು ।
ನಾ ನಿಂತೇ ಇರುವೆ ಬಟ್ಟಲು ಹಿಡಿದು । ನಿನ್ನ ಹಿಂದೆಯೇ ಎಂಬುದ ತಿಳಿ ॥ 158

ನೀನೆನಬಹುದುನಾ ವ್ಯಾಯಾಮ ಮಾಡುವದು । ಹಾಲನ್ನು ಧಾರಾಳ ನೀವು ಕುಡಿಯುವುದು ।
ನಮಗೆ ಗೊತ್ತೆ ಇಲ್ಲ ಇಂಥದ್ದು । ಕಾರ್ಯದಲಿ ದಕ್ಷನಾಗಿರಬೇಕು ॥ 159

ಈ ಬಾಬಾರ ಪ್ರತಿಜ್ಞಾವಾಣಿಯನು ಪ್ರಮಾಣವೆಂದು ತಿಳಿದು ನಡೆದವನು ।
ಇಹಪರದಲಿ ಸುಖದ ಗಣಿಯನು । ಅವನು ಹೊಂದಿದನೆಂದು ತಿಳಿಯಬೇಕು ॥ 160

ಶ್ರೋತೃಗಳಲ್ಲಿ ಇನ್ನೊಂದು ವಿನಂತಿ ಇನ್ನು । ಕ್ಷಣವೊಂದು ಸ್ಥಿರ ಮಾಡಿ ಮನಸನು ।
ಕೇಳಬೇಕೀ ಸ್ವಾನುಭವದ ಕಥೆಯನು । ನಿಶ್ಚಯ ಪೋಷಕತೆ ಸಾಯಿಯದು ॥ 161

ಮಾಡಲು ಸ್ವದ್ವಿತೀಯ ನಿಯಮನ । ಹೇಗೆ ಮಹಾರಾಜರೀಯುವರು ಉತ್ತೇಜನ ।
ಕೇಳಿರಿ ಸಾಯಿಯ ಅನುಗ್ರಹದಾನ । ಮೌನವಾಗಿ ಕುಳಿತುಕೊಂಡು ॥ 162

ಭಕ್ತನು ಅನನ್ಯ ಶರಣಾಗಬೇಕು । ಭಕ್ತಿಯ ಕೌತುಕವ ಅವಲೋಕಿಸಬೇಕು ।
ಆಮೇಲೆ ಸಾಯಿಯ ಲೀಲೆಗಳ ಅನುಭವಿಸಬೇಕು । ನಿತ್ಯ ಹೊಸ ಹೊಸ ರೀತಿಯಲಿ ॥ 163

ಪ್ರಾತಃ ಕಾಲದ ಸಮಯವಾಗಲು । ನಿದ್ರೆಯಿಂದ ಎಚ್ಚರಾಗಲು ।
ಸದ್ಬುದ್ಧಿಯ ತರಂಗಳು ಮನದಲೇಳಲು । ಅದನ್ನೇ ನಿರ್ಧಾರದಿಂದ ಬೆಳೆಸಿಕೊಳ್ಳಬೇಕು ॥ 164

ಅದೇ ವೃತ್ತಿಯದಾಗಲು ಪರಿಪೋಷ । ಮನಕಾದೀತು ಅತಿ ಸಂತೋಷ ।
ಆಗುವುದು ಬುದ್ಧಿಯದೂ ವಿಕಾಸ । ಅಂತರಂಗವೂ ಪ್ರಸನ್ನವಾಗುವದು ॥ 165

ಇದು ಒಂದಿದೆ ಸಂತಉಕ್ತಿ । ಬೇಕೆಂದರೆ ತೆಗೆದುಕೊಳ್ಳವ ಅದರ ಪ್ರತೀತಿ ।
ಅನುಭವದಿಂದುಟಾಯಿತು ಮನಕೆ ಶಾಂತಿ । ಚಿತ್ತದಿ ಆಶ್ಚರ್ಯ ಮೂಡಿತು ॥ 166

ಶಿರಡಿಯಂಥ ಪವಿತ್ರ ಸ್ಥಾನ । ಗುರುವಾರದಂಥ ಮಂಗಲದಿನ ।
ರಾಮನಾಮದ ಅಖಂಡ ಆವರ್ತನ । ಮಾಡಬೇಕೆಂದು ಮನವಾಯಿತು ॥ 167

ಬುಧವಾರ ರಾತ್ರಿ ಹಾಸಿಗೆಯೊಳಗೆ । ದೇಹವು ನಿದ್ರಾವಶವಾಗುವವರೆಗೆ ।
ಮನಸು ರಾಮ ಸ್ಮರಣೆಯೊಳಗೆ । ಹಾಕಿ ಒಳಗೆ ಇಟ್ಟು ಬಿಟ್ಟೆ ॥ 168

ಪ್ರಾತಃ ಕಾಲದಲ್ಲಿ ಎಚ್ಚರಾಗಲು । ರಾಮನಾಮವೇ ಬಂತು ಸ್ಮರಣೆಯೊಳು ।
ಆಮೇಲೆ ಅದೇ ವೃತ್ತಿಯು ಹಾಸಿಗೆಯಿಂದೇಳಲು । ಜಿವ್ಹೆಗೆ ಬಂದು ಸಾರ್ಥಕಗೊಳಿಸಿಕು ॥ 169

ನಿಶ್ಚಯದಿಂದ ಮನವನಿಲ್ಲಿಸಿ । ಶೌಚಮುಖಮಾರ್ಜನಗಳನ್ನು ಮುಗಿಸಿ ।
ಸಿಕ್ಕ ಹೂವುಗಳಾನರಿಸಿ । ತೆಗೆದುಕೊಂಡು ಹೊರಟೆ ಸಾಯಿ ದರ್ಶನಕೆ ॥ 170

ಬಿಟ್ಟು ದೀಕ್ಷಿತರ ಮನೆಯನು । ಬುಟ್ಟಿಯವರ ವಾಡೆಯ ಹೊರಗೆ ಬಂದೆನು ।
ಔರಂಗಬಾದಕರರು ಒಂದು ಮಧುರ ಪದ್ಯವನ್ನು । ಅಂದವಾಗಿ ಹಾಡುತ್ತಿರುವುದನ್ನು ಕೇಳಿದೆನು ॥ 171

ಆ ಪದ್ಯದ ಸಮಯೋಚಿತೆಯನಿಲ್ಲಿ । ಓವೀ ರೂಪದಲಿ ಹೇಳಿದಲ್ಲಿ ।
ಕುಂದು ಬಂದೀತು ಮೂಲ ಪದದಲಿ । ಶ್ರೋತೃಗಳ ಮನ ಮುದುಡೀತು ॥ 172

ಅದಕಾಗಿ ಸಮೂಲವಾಗಿ ಆ ಹಾಡನ್ನು । ಅಕ್ಷರವನ್ನೂ ಬಿಡದೆ ಹಾಡುವೆನು ।
ನಿರ್ಮಲ ಉಪದೇಶವಿರುವುದು ಮೂಲ ಪದ್ಯದಲ್ಲಿ । ಆದ್ದರಿಂದ ಆನಂದವಾದೀತು ನಿಮಗೆ ॥ 173

**॥ಪದ॥**

ಗುರು ಕೃಪಾಂಜನ ಪಾಯೋ ಮೇರೆ ಭಾಯಿ । ರಾಮ ಬಿನಾ ಕಛು ಮಾನತ ನಾಹಿ ॥ ಧೃ ॥
ಅಂದರ ರಾಮಾ ಬಾಹರ ರಾಮಾ । ಸಪನೇಮೆ ದೇಖತ ಸೀತಾರಾಮಾ ॥ 1 ॥
ಜಾಗತರಾಮಾ ಸೋವತ ರಾಮಾ । ಜಹಾಂ ದೇಖೇ ವಹಾಂ ಪೂರನ ಕಾಮಾ ॥ 2 ॥
ಏಕಾಜನಾರ್ಧನಿ ಅನುಭವ ನೀಕಾ । ಜಹಾಂ ದೇಖೇ ವಹಾಂ ರಾಮ ಸರೀಖಾ ॥ 3 ॥ಗುರು ॥

ಮೊದಲೇ ಮನದಲ್ಲಿ ನಿಶ್ಚಯಿಸಿದ್ದು । ರಾಮಾನಾಮದಲಿ ಮನ ತೊಡಗಿಸಬೇಕೆಂದು ।
ಇನ್ನು ಆ ನಿಶ್ಚಯವು ಕಾರ್ಯಾಗತವಾಗುವುದು । ಈ ಪದ ಕೇಳಿ ಅದಕೆ ದೃಢತೆಯುಂಟಾಯಿತು ॥174

ಆದರಿಂದನಿಸಿತೆನ್ನ ಚಿತ್ತಕ್ಕೆ । ಈ ನನ್ನ ನಿಶ್ಚಯಯಾಂಕುರಕ್ಕೆ ।
ಸಾಯಿ ಪದಾಂಬುಜ ಸೇಚನವನಿದಕೆ । ಮಾಡುತ್ತಿರುವಂತೆನಿಸಿತು ॥ 175

ತಂಬೂರಿಯ ಹಿಡಿದು ಕೈಯಲಿ । ಸಾಯಿಯ ಎದರು ಅಂಗಳಗಲ್ಲಿ ।
ಔರಂಗಾಬಾದಕರರು ಉಚ್ಚಸ್ವರದಲ್ಲಿ । ಹೇಳುವ ಧ್ವನಿ ಗಾಳಿಯೊಳು ಹರಡಿತು ॥176

ಔರಂಗಾಬಾದಕರ ಬಾಬಾರ ಭಕ್ತ । ನನ್ನ ಹಾಗೇಯೇ ಬಾಬಾರ ಚರಣದಲಿ ಆಸಕ್ತ ।
ಸಾಕಷ್ಟು ಪದಗಳಿರಲು ಮುಖೋದ್ಗತ । ಇವನೇ ಯಾಕೆನಬೇಕು ಆಗ ॥ 177

ನನ್ನ ಮನೋಗತವನ್ನು ಯಾರೂ ಅರಿಯರು । ಹಾಗಿರಲು ಆಗ ಇದೇ ಪದವನ್ನೇಕೆ ಹಾಡಿದರು ।
ಕಾಣುವದೆಂತು ಬಾಬಾ ಸೂತ್ರವನಲುಗಿಸುವರು । ಅಂತೆಯೇ ಇಚ್ಛೆ ಸ್ಫುರಿಸುವನೆಂದು ॥ 178

ನಾವೆಲ್ಲ ಕೇವಲ ಬೊಂಬೆಗಳು । ಸಾಯಿ ಮಾತೆಯೇ ಸೂತ್ರ ಧಾರಿಗಳು ।
ತಾವು ಮಾತಾನಾಡದೆ ಕೊಟ್ಟರೂ ಕೈಯೊಳು । ಸರಿಯಾದ ಉಪಾಸನೆಯನೇ ॥ 179

ವೃತ್ತಿ ಇದ್ದಿತೆನ್ನಂತರಂಗದಲಿ । ಪ್ರತಿ ಬಿಂಬಿಸಿತದು ಬಾಬಾರ ಚಿತ್ತದಲಿ ।
ಪ್ರತ್ಯಕ್ಷ ಪ್ರತೀತಿಯನೀರೀತಿಯಲಿ । ಎನಿಸುವುದು ನಿಶ್ಚಿತವಾಗಿ ತೋರಿಸಿದರು ॥ 180

ಈ ನಾಮದ ಮಹಿಮೆ ಎಷ್ಟೆಂದು । ಸಂತ ಮಹಂತರು ವರ್ಣಿಸಿದ್ದು ।
ನಾ ಪಾಮರನೇನು ವರ್ಣಿಸುವುದು । ಸ್ವರೂಪದ ಪ್ರಾಪ್ತಿ ಇದರಿಂದಲೇ ॥ 181

ಈ ಎರಡಕ್ಷರಗಳೆ ತಿರುವಿ ಸ್ಮರಿಸಿದ । ದಾರಿಗಳ್ಳ ಬೇಡ ಉದ್ಧಾರವಾದ ।
ವಾಲ್ಯಾ ಎಂಬವ ವಾಲ್ಮೀಕಿ ಎನಿಸಿದ । ಆಶ್ಚರ್ಯಕರ ವ್ಯಾಕ್ಸಿದ್ಧಿಯನು ಪಡೆದ ॥ 182

'ಮರಾ ಮರಾ'ವನ್ನು ತಿರುವಿ ಅನ್ನಲು । ರಾಮ ಪ್ರಕಟನಾದನು ಜಿವ್ಹೆಯೊಳು ।
ಅವತಾರ ಚರಿತೆಯನು ರಾಮ ಜನ್ಮದ ಮೊದಲು । ರಾಮ ಚರಿತೆಯನು ಬರೆದನು ॥183

ರಾಮನಾಮದಿಂದ ಪತೀತ ಪಾವನ । ರಾಮನಾಮದಿಂದ ಲಾಭಗಹನ ।
ರಾಮನಾಮಅಭೇಧ ಭಜನ । ಬ್ರಹ್ಮ ಸಂಪನ್ನ ಈ ನಾಮದಿಂದ ॥ 184

ರಾಮನಾಮದ ಆವರ್ತನದಿಂದ । ಬಿಡುಗಡೆ ಜನ್ಮ ಮರಣಗಳಿಂದ ।
ಒಂದು ರಾಮನಾಮದ ಸ್ಮರಣೆಯಿಂದ । ಕೋಟಿಗುಣ ಹೆಚ್ಚು ಲಾಭ ॥ 185

ರಾಮನಾಮದ ಗರ್ಜನೆ ಇರುವಲ್ಲಿ । ವಿಷ್ಣುವಿನ ಸುದರ್ಶನ ತಿರುಗುವುದಲ್ಲಿ ।
ಕೋಟಿ ವಿಘ್ನಗಳ ಅರಿದು ಚೆಲ್ಲಿ । ದೀನ ಸಂರಕ್ಷಣೆ ಮಾಡುವ ನಾಮವಿದು ॥ 186

ಸಾಯಿಗೆ ಉಪದೇಶಕ್ಕೆ ಇಂಥದೇ ಸ್ಥಳವೆಂದಿಲ್ಲ । ಸಮಯ ಹೊತ್ತು ಗೊತ್ತು ಒಂದೂ ಇಲ್ಲ ।
ಕೂಡುತ್ತ ಏಳುತ್ತ ಓಡಾಡುತಿರುವಂತೆಲ್ಲ । ಸಹಜದಲ್ಲೆಲ್ಲ ಉಪದೇಶ ನಡೆವುದು ॥ 187

ಇದರ ಬಗ್ಗೆಯೇ ಒಂದು ಕಥೆ । ಕೇಳುವಾಗಿರಬೇಕು ಸಾದರತೆ ।
ಪ್ರತ್ಯಯಕೆ ಬರುವುದು ಸಾಯಿಯ ಸದಯತೆ ।ಅಂತೆಯೇ ಅವರ ವ್ಯಾಪಕತೆಯು ॥ 188

ಒಮ್ಮೆ ಒಬ್ಬ ಭಕ್ತ ಶ್ರೇಷ್ಠನು । ತೆಗೆದುಕೊಂಡು ಯಾರ ಯಾರದೋ ಸುದ್ದಿಯನು ।
ಕುತರ್ಕಗಳಲಿ ತೊಡಗಿ ತಾನು । ನಿಂದೆಯಲ್ಲಿ ತೊಡಗಿದನು ॥ 189

ಗುಣವೆಂಬುವುದು ಒಂದೆಡೆ ಉಳಿದು । ನಿಂದೆಯ ಪ್ರವಾಹವೇ ಬಾಯಿಂದ ಹರಿದು ।
ಮಾತಿನಲ್ಲಿಯ ಸ್ವಾದ ಕಳೆದು । ನಿಂದೆಯೇ ಉಕ್ಕಿ ಹರಿಯತೊಡಗಿತು ॥ 190

ಅಂಥದೇನಾದರೂ ಕಾರಣವಿದ್ದರೆ । ಯಾರಿಂದಾದರೂ ಕೆಟ್ಟ ಆಚರಣೆಯಾಗಿದ್ದರೆ ।
ಪ್ರಬೋಧನ ಮಾಡಬೇಕು ಮುಖದೆದುರೇ । ಅವನ ಬಗ್ಗೆ ಕನಿಕರ ಬಂದು ॥ 191

ನಿಂದೆಯನೆಂದೂ ಮಾಡಬಾರದು । ಇದು ಪ್ರತಿಯೊಬ್ಬರಿಗೂ ತಿಳಿದಿರುವದು ।
ಆದರೂ ಮಾತು ಹೊಟ್ಟೆಯಲುಳಿಯದು । ಎಷ್ಟೇ ಮನ ಬಿಗಿ ಹಿಡಿದರೂ ॥ 192

ಬಳಿಕ ಅಲ್ಲಿಂದ ಕಂಠದಿ । ಕಂಠದಿಂದ ನಾಲಿಗೆ ತುದಿ ।
ಅಲ್ಲಿಂದ ಮೆಲ್ಲಗೆ ತುಟಿಗಳ ಸಂದಿ । ಅಲ್ಲಿಂದ ಸುಖವಾಗಿ ಪ್ರವಹಿಸುವದು ॥ 193

ನಿಂದಕರಿಗಿಂತಿಲ್ಲ ಬೇರೆ । ಉಪಕಾರಿಗಳು ಮೂಲೋಕದಲಿ ಬೇರೆ ।
ಯಾರ ನಿಂದೆ ನಡೆದಿರುವದೋ ಅವರೇ । ಪರೋಪರಿ ಕಲ್ಯಾಣ ಹೊಂದುವರು ॥ 194
ಕೆಲವರು ಕೊಳೆ ತೊಳೆಯುವರು ಅಂಟ್ಯಾಳದಿಂದ । ಕೆಲವರು ಸಾಬಣಾದಿ ಸಾಧನಗಳಿಂದ ।
ಕೆಲವರು ಶುದ್ಧ ನಿರ್ಮಲ ನೀರಿನಿಂದ । ನಿಂದಕರದ ಜಿವ್ಹೆಯಿಂದ ತೊಳೆಯುವರು ॥ 195

ತನ್ನ ಮಾನಸಿಕ ಅಧೋಗತಿ । ಪರೋಪಕಾರಾರ್ಥವಾಗಿ ಸಹಿಸುವರು ಅತಿ ।
ಅವರ್ಣನೀಯ ಆ ಮಹದುಪಕೃತಿ । ಅದಕೆ ನಿಂದಕನು ಅತಿವಂದ್ಯ ॥ 196

ಹೆಜ್ಜೆ ಹೆಜ್ಜೆಗೆ ಎಚ್ಚರಗೊಳಿಸುವರು । ನಿಂದೆಯ ನಿಮಿತ್ತವಾಗಿ ದೋಷಗಳ ತಿಳಿಸುವರು ।
ಅನ್ಯರ ಮುಂಬರುವ ಅನರ್ಥವ ಕಳೆವರು । ಅವರುಪಕಾರವನೆಷ್ಟೆಂದು ವರ್ಣಿಸಲಿ ॥ 197

ಪರಿಪರಿಯಲಿ ಸಾಧು ಸಂತರು । ಯಾರ ಮಹಿತಿಯ ಹೊಗಳಿರುವರು ।
ಆ ನಿಂದಕ ವೃಂದದೆದುರು । ಸಾಷ್ಟಾಂಗ ನಮನವೆನ್ನದು ॥ 198

ಅತ್ಯಂತ ಹೇಸಿಗೆ ಬಂದಿದೆ ಶ್ರೋತೃಗಳಿಗೆ । ನಿಂದಕರು ಹೊರಟರು ಬಹಿರ್ದೆಶೆಗೆ ।
ಜನರೂ ನಡೆದಿದ್ದರು ಮಶೀದಿಗೆ । ಬಾಬಾರ ದರ್ಶನಕ್ಕೆಂದು ॥ 199

ಬಾಬಾ ಪೂರ್ಣ ಅಂತರ್ಜ್ಞಾನಿಗಳಿದ್ದು । ಭಕ್ತರಿಗೆ ಶಿಕ್ಷಣ ಕೊಡುವರು ಸಮಯ ತಿಳಿದು ।
ಮುಂದೆ ನಡೆಯಿತು ಪ್ರಕಾರ ಯಾವದು । ಹೇಗೆ ಎಂಬುದನು ಕೇಳಿರಿ ॥ 200

ತಮ್ಮ ಜನರ ಜೊತೆ ಹೋಗುವಾಗ ಲೇಂಡಿಗೆ । ಬಾಬಾ ಕೇಳಿದರು ಆ ಭಕ್ತನ ಬಗ್ಗೆ ।
ತಿಳಿಯಿತು ಹೋಗಿಹನವ ಹಳ್ಳದೆಡೆಗೆ । ಬಹಿರ್ದಸೆಯ ಕಾರಣಕೆ ॥ 201

ಕಾರ್ಯಕ್ರಮವನು ಮುಗಿಸಿಕೊಂಡು । ಬಾಬಾ ಲೇಂಡಿಯಿಂದ ತಿರುಗಿ ಬರುತಿದ್ದು ।
ಅದೇ ಕಾಲಕ್ಕೆ ಭಕ್ತನು ಹಳ್ಳದಿಂದ ತಿರುಗಿ ಬಂದು । ಮನೆಯ ಕಡೆಗೆ ಹೊರಟನು ॥ 202

ಪರಸ್ಪರರ ಭೆಟ್ಟಿಯಾಗಲು । ನಡೆಯಿತೊಂದು ಪ್ರಕಾರ ಆ ಕಾಲದೊಳು ।
ಕೈ ಮುಗಿದು ಕೇಳುವೆನು ಶ್ರೋತೃಗಳು । ಚಿತ್ತ ವಿಟ್ಟು ಕೇಳಬೇಕು ॥ 203

ಅಲ್ಲಿಯೇ ಒಂದು ಬೇಲಿಯ ಬದಿಗೆ । ವಿಷ್ಟಾಮಿಷ್ಟಾನ್ನವ ಯಥೇಷ್ಟವಾಗೇ ।
ಗ್ರಾಮ ಸೂಕರಿಯೊಂದು ಚಪ್ಪರಿಸುತಿತ್ತು ನಾಲಿಗೆ । ಬಾಬಾ ಕೈ ಮಾಡಿ ತೋರಿಸಿದರದನು ॥204

'ನೋಡಿರಿ ಆ ನಾಲಿಗೆಯ ಸವಿ ಎಂಥದು । ಜನರು ಮಾಡಿದ ಮಲವನ್ನು ತಿನ್ನುವದು ।
ಬಂಧು ಸ್ವಜನರ ಹಾಯಗೊಡದು । ತನ್ನ ಪ್ರೀತಿಯ ಹರಿಸಿಕೊಳ್ಳುತಿಹುದು ॥ 205

ಬಹಳ ಸುಕೃತಗಳಿಂದ ಕೂಡಿ । ಬಂದ ನರಜನ್ಮವ ಹೀಗೆ ವ್ಯರ್ಥ ಮಾಡಿ ।
ಕೊಳ್ಳುವ ಆತ್ಮಘಾತಕಿಗೆ ಈ ಶಿರಡಿ । ಸುಖದ ಸಾಮ್ರಾಜ್ಯವನೇನು ಕೊಟ್ಟೀತು' ॥206

ಬಾಬಾ ಹೀಗೆ ಹೇಳುತ್ತ ಹೋದರು । ಭಕ್ತರು ಮನದಲ್ಲಿ ಲಜ್ಜಿತರಾದರು ।
ಪ್ರಾತರ್ವೃತ್ತವನೆಲ್ಲ ನೆನೆದರು । ಆ ಮಾತು ಮನಕೆ ಚುಚ್ಚಿದವು ॥ 207
ಹೀಗೆ ಬಾಬಾ ಪರೋಪರಿಯಾಗಿ । ಬೋಧಿಸುವರು ಭಕ್ತರಿಗೆ ಪ್ರಸಂಗಾನುಸಾರವಾಗಿ ।
ಇದರ ಸಾರವ ತಿಳಿದು ಮನದಲ್ಲಿಟ್ಟವರಿಗಾಗಿ । ದೂರವೆಲ್ಲಿದೆ ಆ ಪರಮಾರ್ಥ ॥208

'ದೇವರು ನನ್ನವನೇ ಇದ್ದಲ್ಲಿ । ತಂದು ಕೊಡುವನವ ನಾ ಮಲಗಿದ್ದಲ್ಲಿ'।
ಈ ಗಾದೆಯ ಸತ್ಯತೆ ನಿಜದಲ್ಲಿ । ಅನ್ನ ವಸ್ತ್ರಗಳಿಗೆ ಮಾತ್ರ ಅನ್ವಯಿಸುವದು ॥ 209

ಈ ಮಾತನು ಪರಮಾರ್ಥಕ್ಕೆ ಅನ್ವಯಿಸುವವ । ಸಂಪೂರ್ಣ ಪರಮಾರ್ಥವನೇ ಕಳೆದುಕೊಳ್ಳುವ ।
'ಮಾಡಿದಂತೆ ಪಡೆಯುವದು' । ಬಹುಮುಖ್ಯ ಮಾತುಗಳು ಬಾಬಾರವಿವು ॥ 210

ಮತ್ತೂ ಬಾಬಾರ ನುಡಿ ಕೇಳಿದಲ್ಲಿ । ಮನವು ಓಲಾಡುವದು ಸ್ವಾನಂದದಲ್ಲಿ ।
ಭಾವಭಕ್ತಿ ಹಸಿಯು ಇದ್ದರೆ ಅಲ್ಲಿ । ಬೇರುಗಳು ಆಳಕ್ಕೆ ಇಳಿಯುವವು ॥ 211

"ಜಲಸ್ಥಲ ಕಾಷ್ಠವೆಲ್ಲದರಲ್ಲಿ । ಜನವನ ದೇಶ ವಿದೇಶಗಳಲ್ಲಿ ।
ತುಂಬಿರುವೆ ನಾ ತೇಜ ಆಕಾಶಗಳಲಿ । ಒಂದೇ ಎಡೆ ನನ್ನದಲ್ಲಿ ॥ 212

ಮೂರು ಮೊಳದ ದೇಹಕ್ಕೆ ಪರಿಮಿತ । ಇದೇ ಮದ್ವ್ಯಾಪ್ತಿ ಎಂದು ತಿಳಿಯುತ ।
ಅವರ ಭ್ರಾಂತಿಯ ಬಿಡಿಸಲೆನುತ । ಮೂರ್ತಿಮಂತ ನಾನಾದೆ ॥ 213

ನಿಷ್ಕಾಮರಾಗಿ ನನ್ನ ಭಜನ । ಯಾರು ಮಾಡುವರು ರಾತ್ರಂದಿನ ।
ಅವರು ಪ್ರತ್ಯಕ್ಷ ನಾನೇ ನನ್ನತನ । ಬೇರೆತನವೆಂಬುದಿಲ್ಲದಂತೆ ॥ 214

ಬೆಲ್ಲವಿದ್ದೀತು ಸಿಹಿ ಬಿಟ್ಟು । ಸಾಗರವು ತರಂಗಗಳ ಹೊರತು ।
ಕಣ್ಣು ತೇಜವ ತ್ಯಜಿಸೀತು । ನನ್ನ ಹೊರತು ಭಾವಿಕ ಭಕ್ತ ಹಾಗೆ ॥ 215

ತಪ್ಪಬೇಕು ಜನ್ಮಮರಣಾವರ್ತ । ಯಾರ ಮನದಲಿ ಹೀಗಿರುವದು ನಿಶ್ಚಿತ ।
ಪ್ರಯತ್ನಪೂರ್ವಕ ಅವರಿರಬೇಕು ಧರ್ಮವಂತ । ಸ್ವಸ್ಥ ಚಿತ್ತರು ಯಾವಾಗಲೂ ॥ 216

ವರ್ಮದ ಮಾತುಗಳನವ ಬಿಡಬೇಕು । ಮರ್ಮದಿ ಯಾರನ್ನೂ ಇರಿಯದಿರಬೇಕು ।
ಸದಾ ಶುದ್ಧ ಕರ್ಮದಲಿ ನಿರತನಿರಬೇಕು । ಚಿತ್ತವನು ಸ್ವಧರ್ಮದಲಿ ಇಟ್ಟುಕೊಂಡು ॥ 217

ಮನಬುದ್ಧಿಗಳನು ನನಗರ್ಪಿಸಿ । ಸದಾಕಾಲವೂ ನನ್ನನ್ನು ಸ್ಮರಿಸಿ ।
ದೇಹದ ಚಿಂತೆಯ ದೂರವಿರಿಸಿ । ಅಂಥವಗೆ ಭಯವೆಂಬುದಿಲ್ಲ ನಿಜದಲಿ ॥ 218

ಯಾವನು ನೋಡುವನು ನನ್ನನು ಅನನ್ಯ । ಹೇಳುವನು ಕೇಳುವನು ನನ್ನಕಥೆಯನವನೇ ಧನ್ಯ ।
ಭಾವದಿ ಹಿಡಿಯದಿಹನು ಮದನ್ಯ । ಚಿತ್ತ ಚೈತನ್ಯವು ಲಭಿಸುವದು" ॥ 219

ನನ್ನ ನಾಮವ ಜಪಿಸು ಶರಣು ಬಾ ನನಗೆಂದು । ಎಲ್ಲರಿಗೂ ಇದನೆ ಹೇಳುತ್ತಲಿದ್ದು ।
ಆದರೂ ತಿಳಿಯಲು ನಾನು ಯಾರೆಂದು । ಶ್ರವಣ ಮನನಗಳ ಆಜ್ಞಾಪಿಸಿದರು ॥ 220

ಒಬ್ಬನಿಗೆ ಭಗವನ್ನಾಮಸ್ಮರಣೆ । ಒಬ್ಬನಿಗೆ ಭಗವಲ್ಲೀಲಾ ಶ್ರವಣ ।
ಒಬ್ಬರಿಗೆ ಭಗವತ್ಪಾದ ಪೂಜನ । ಬೇರೆ ಬೇರೆಯವರಿಗೆ ನಿಯಮನ ಬೇರೆ ಬೇರೆ ॥ 221

ಒಬ್ಬರಿಗೆ ಆಧ್ಯಾತ್ಮ ರಾಮಾಯಣ । ಒಬ್ಬರಿಗೆ ಜ್ಞಾನೇಶ್ವರಿ ಪುರಶ್ಚರಣ ।
ಒಬ್ಬರಿಗೆ ಹರಿವರದಾ ಪಾರಾಯಣ । ಗುರುಚರಿತ್ರಾವಲೋಕನ ಒಬ್ಬರಿಗೆ ॥ 222

ಒಬ್ಬರನು ಕುಳ್ಳಿರಿಸುವರು ಚರಣದಲ್ಲಿ । ಇನ್ನೊಬ್ಬನನು ಖಂಡೋಬನ ಗುಡಿಯಲಿ ।
ವಿಷ್ಣು ಸಹಸ್ರನಾಮಾವಲಿಯನೊಬ್ಬರ ಕೊರಳಲಿ । ಕಟ್ಟುವರು ಬಲು ಕಳಕಳಿಯಿಂದ ॥ 223

ಉಪದೇಶಿರುವರೊಬ್ಬರಿಗೆ ರಾಮವಿಜಯ । ಇನ್ನೊಬ್ಬರಿಗೆ ಧ್ಯಾನ ಮಹಾತ್ಮ್ಯ ।
ಮತ್ತೊಬ್ಬರಿಗೆ ಛಾಂದೋಗ್ಯ ಗೀತಾರಹಸ್ಯ । ವಿಶ್ವಾಸದಿಂದ ಸ್ವಾರಸ್ಯವು ಅನುಭವದಲಿ ॥ 224

ಯಾರಿಗೆ ಯಾವದು ಯಾರಿಗೆ ಯಾವದು । ದೀಕ್ಷಾ ಪ್ರಕಾರಕೆ ಸೀಮೆಯೇ ಇರದು ।
ಯಾರಿಗೆ ಪ್ರತ್ಯಕ್ಷದಲಿ ಯಾರಿಗೆ ದೃಷ್ಟಾಂತದಿಂದೂ । ಉಪದೇಶಿಸುವ ರೀತಿಯೇ ವಿಚಿತ್ರ ॥ 225

ಭಕ್ತರು ಹದಿನೆಂಟು ಜಾತಿಯವರು । ಓಡೋಡಿ ದರ್ಶನಕೆ ಬರುವರು ।
ಮದ್ಯದಲಿ ಅತಿ ಪ್ರೀತಿ ಇದ್ದವರೂ ಬರುವರು । ಅಂಥವರ ಕನಸಿನಲೂ ಹೋಗುವರು ॥ 226

ಅವರೆದೆಯ ಮೇಲೆ ಕುಳಿತುಕೊಂಡು । ಕೈ ಕಾಲುಗಳಿಂದ ಬಡಿದು ವದ್ದು ।
ಮದ್ಯ ಮುಟ್ಟುವದಿಲ್ಲೆಂದು ವಚನ ಪಡೆದು । ತಿರುಗಿಬರುವರು ಅಲ್ಲಿಂದ ॥ 227

ಲಗ್ನ ಗ್ರಹದ ಗೋಡೆಗಳ ಮೇಲೆ ಜ್ಯೋತಿಷಿಗಳು । ಬಿಡಿಸುವರು ಹರಿಹರರ ಚಿತ್ರಗಳು ।
ಬರೆದು ಗುರು ಬ್ರಹ್ಮಾದಿ ಮಂತ್ರಗಳು । ಭಕ್ತಾರ್ಥಿಗಳ ಕನಸಿನಲಿ ಬರೆವರು ॥ 228

ಯಾರು ಕದ್ದು ಆಸನವ ಹಚ್ಚುತಿರಲು । ಇಲ್ಲವೇ ಹಠಯೋಗ ಸಾಧನೆ ಮಾಡುತಿರಲು ।
ಅಂತರ್ಜ್ಞಾನದಿಂದ ಬಾಬಾರಿಗದು ತಿಳಿಯಲು । ಗುರಿಯಿಟ್ಟು ಬಾಣದಿಂದಿರಿಯುವರು ॥ 229

ಯಾರಿಗೆ ಅಪರಿಚಿತರ ಕೈಲಿ । ಹೇಳಿಕಳಿಸುವರೀ ರೀತಿಯಲಿ ।
ಸಿಕ್ಕಷ್ಟು ರೊಟ್ಟಿ ತಿಂದು ಸುಮ್ಮನೇ ಕುಳಿತುಕೊಳ್ಳಿ । ಸ್ವಲ್ಪ ತಾಳ್ಮೆ ಹಿಡಿದಿರಬೇಕು ॥ 230

ಕೆಲವರಿಗೆ ಇದುರಿನಲ್ಲೇ ಒತ್ತಿ ಹೇಳುವರು । ನಾವಂತೂ ಬಹಳ ಕಹಿ ಜಾತಿಯವರು ।
ಒಂದೆರಡು ಸಲ ಹೇಳಿ ನೋಡುವವರು । ಕೊನೆಯ ಗತಿ ಬಹಳ ಕಠಿಣವಾದೀತು ॥ 231

ಒಮ್ಮೆ ಹೇಳುವೆವು, ಹೇಳುವೆವು ಎರಡು ಸಲ । ಸುಮ್ಮನೇ ಕೇಳದೇ ಹೋದರೆ ನಮ್ಮ ಮಾತುಗಳ ।
ಅವನು ಹೊಟ್ಟೆಯ ಮಗನೇ ಏಕಿರವಲ್ಲ । ಎರಡು ಹೋಳು ಮಾಡಿ ಬಿಸುಡುವೆವು ॥ 232

ಮಹಾನುಭಾವರ ಮತಿಯೂ ಮಹಾನ । ನಾ ಪಾಮರನೆಷ್ಟು ಹೇಳಲಿ ಅವರ ಚಮತ್ಕೃತಿಗಳನ ।
ಒಬ್ಬರಿಗೆ ಕೊಡುವರು ಜ್ಞಾನ ಪ್ರಾಪ್ತಿ ವಿರಕ್ತಿಗಳನ । ಸದ್ಭಾವಭಕ್ತಿಗಳನೊಬ್ಬರಿಗೆ ॥233
ಯಾರಿಗೋ ಯಾವದಾದರೋ ವ್ಯವಹಾರದಲ್ಲಿ । ಪ್ರಶಸ್ತ ವರ್ತನದ ಶಿಸ್ತು ಹಚ್ಚುವರಲ್ಲಿ ।
ಉದಾಹರಣಕ್ಕೆಂದು ಒಂದಿಲ್ಲಿ । ಚುಟುಕಾದ ಕಥೆಯನು ಹೇಳುವೆನು ॥ 234

ಒಮ್ಮೆ ಬಾಬಾ ನಡು ಮಧ್ಯಾನ್ಹದಲ್ಲಿ । ತಿಳಿಯದು ಏನು ಬಂತೋ ಅವರ ಮನದಲ್ಲಿ ।
ರಾಧಾಕೃಷ್ಣಳ ಮನೆಯ ಮಗ್ಗುಲಲ್ಲಿ । ಬಾಬಾ ಅಕಸ್ಮಾತ್ತಾಗಿ ಬಂದರು ॥ 235

ಜೊತೆಗೆ ಕೆಲ ಜನರಿದ್ದರು । ಅವರಿಗೆ ನಿಚ್ಚಣಿಕೆ ತನ್ನಿರೆಂದರು ।
ಕೂಡಲೇ ನಿಚ್ಚಣಿಕೆ ತಂದಿಟ್ಟರು । ಅವರಲಿ ಯಾರೋ ಒಬ್ಬರು ॥ 236

ಬಾಬಾ ಅದನು ಮನೆಯ ಮೇಲೆ ಹಚ್ಚಿದರು । ಸರಸರನೇ ತಾವೇ ಏರಿದರು ।
ಅವರ ಮನದಲಿದ್ದುದ ಯಾರೂ ತಿಳಿಯರು । ಈ ಯೋಜನೆ ಯಾತಕ್ಕಾಗಿ ಎಂದು ॥237

ವಾಮನ ಗೋಂದಕರನ ಮನೆಗೆ । ನಿಚ್ಚಣಿಕೆ ಹಚ್ಚಿಸಿದ್ದರಲ್ಲಿಗೆ ।
ತಾವೇ ಹತ್ತಿ ನಿಚ್ಚಣಿಕೆ । ಚಪ್ಪರವನ್ನೇರಿದರು ॥ 238

ಅಲ್ಲಿಂದ ರಾಧಾಕೃಷ್ಣಳ ಚಪ್ಪರಕೆ । ಇದ್ದಿತಾವುದು ಅದರ ಮಗ್ಗುಲಕೆ ।
ಅದನ್ನೂ ದಾಟಿ ಲಗು ಬಗೆ । ಈ ಚಮತ್ಕಾರವೇನೆಂದು ತಿಳಿಯದು ॥ 239

ರಾಧಾಕೃಷ್ಣಾಬಾಯಿಗೆ ಮಾತ್ರ । ಅದೇ ಕಾಲಕೆ ಬಹಳ ಪ್ರಖರ ।
ಕಾಡ ಹತ್ತಿತ್ತು ಶೀತ ಜ್ವರ । ಅತ್ಯಂತ ಅಸ್ವಸ್ಥರಾಗಿದ್ದರು ॥ 240

ಎರಡೂ ಕಡೆಗೆ ಇಬ್ಬರು । ಹಿಡಿದಾಗ ಮಾತ್ರ ಬಾಬಾ ನಡೆಯುತಿದ್ದರು ।
ತಾವೇ ಇಷ್ಟು ಅಶಕ್ತರಾಗಿದ್ದರೂ । ಈ ಬಲವೆಲ್ಲಿಂದ ಬಂದಿರಬೇಕು ॥ 241

ಕೂಡಲೇ ಅದರ ಬದಿಯ ಚಪ್ಪರವನು । ಜಾರಿ ಅದರ ಇಳಿಜಾರನು ।
ಇಲ್ಲಿಯೂ ಅದೇ ನಿಚ್ಚಣಿಕೆಯನ್ನು । ಹಚ್ಚಿಸಿ ಕೆಳಗಿಳಿದು ಬಂದರು ॥ 242

ಕಾಲು ಮುಟ್ಟಿದ ಕೂಡಲೇ ಭೂಮಿಗೆ । ಎರಡು ರೂಪಾಯಿಗಳ ನಿಚ್ಚಣಿಕೆಯವನಿಗೆ ।
ಬಾಬಾ ದಕ್ಷತೆಯಿಂದ ಕೊಟ್ಟರಾಗ್ಯೆ । ಒಂದು ಕ್ಷಣದ ವಿಲಂಬ ಮಾಡದೇ ॥ 243

ಎರಡು ಕಡೆ ನಿಚ್ಚಣಿಕೆ ಹಚ್ಚಿದ್ದು । ಇಷ್ಟೇ ಅವನು ಶ್ರಮಬಿಟ್ಟದ್ದು ।
ಯಾವುದಕೆ ಬಾಬಾ ಕೊಟ್ಟರು ಇಷ್ಟೊಂದು । ಅದರ ಪರಿಹಾರವೆಂದು ॥ 244

ಸಹಜ ಜಿಜ್ಞಾಸೆ ಜನರ ಮನಸಿಗೆ । ಇಷ್ಟೇಕೆ ದುಡ್ಡು ಕೊಟ್ಟರು ಅವನಿಗೆ ।
ಬಾಬಾ ಕೊಟ್ಟರಾದರೂ ಹೇಗೆ । ಅದನವರಿಗೆ ಕೇಳಬೇಕು ॥ 245

ಆಗ ಒಬ್ಬ ಕೇಳಿದ ಮಾಡಿ ಧೈರ್ಯ । ಅದಕೆ ಬಾಬಾ ಕೊಟ್ಟ ಪ್ರತ್ಯುತ್ತರ ।
ಯಾರದಾದರೂ ಶ್ರಮದ ಭಾರ । ಹಾಗೇ ಎಂದೂ ಇಟ್ಟುಕೊಳ್ಳಬಾರದು ॥ 246
ಯಾರಿಂದಾದರೂ ಕೆಲಸ ಮಾಡಿಸಿಕೊಳ್ಳಬೇಕು । ಆದರೆ ಅವನ ಶ್ರಮದ ಅರಿವಿರಬೇಕು ।
ಮನಕೊಂದು ನಿಯಮವನೇ ಇಡಬೇಕು । ಮೂಲ್ಯವನು ಪರಿಶ್ರಮಕೆ ಕೊಡದಿರಬಾರದು ॥ 247

ಯಾರಿಗೆ ಗೊತ್ತು ಒಳಗಿನ ಮಾತು । ಬಾಬಾ ಹೇಗೆ ಮಾಡಿದರಿಂತು ।
ಇದು ಅವರದು ಅವರಿಗೇ ಗೊತ್ತು । ಅತಿ ಗೂಢ ಸಂತಾಂತರ್ಗತವಿರುವದು ॥ 248

ಕೇಳುವದು ಅವರ ಮುಖದ ಉದ್ಗಾರ । ಅದೇ ಸರ್ವಸ್ವದಲಿ ನಮಗಾಧಾರ ।
ಈ ರೀತಿ ಇರಲು ವರ್ತನ ನಿರ್ಧಾರ । ವ್ಯವಹಾರವು ಸುರಳೀತ ನಡೆಯುವದು ॥ 249

ಮುಂದಿನ ಅಧ್ಯಾಯ ರುಚಿಯದು । ಇದಕಿಂತ ಅತಿ ಸರಸವಾಗಿರುವದು ।
ಒಬ್ಬ ಕೆಲಸದಾಳಿನ ಮಗಳು ಚಿಕ್ಕದು । ಶೃತಿಯ ಅರ್ಥವ ತಿಳಿಸಿದಳು ॥ 250

ಗಣುದಾಸರು ಹರಿದಾಸರವರು ಪ್ರಾಸಾದಿಕ । ಉಪಕಾರ ಮಾಡಲೆಂದು ಪ್ರಾಕೃತ ಜನಕ ।
ಈಶಾವಾಶ್ಯದ ಭಾಷಾಂತರಕ । ಮನಸ್ಸು ಮಾಡಿಯಾಯಿತು ॥ 251

ಸಾಯಿ ಕೃಪೆಯಿಂದ ಗ್ರಂಥ ಮುಗಿಯಿತು । ಆದರೆ ಒಂದು ಗೂಢಾರ್ಥ ಉಳಿಯಿತು ।
ಅದರಿಂದ ಮನದಲಿ ಶಂಕೆ ಉಳಿಯಿತು । ಬಾಬಾ ಅದನು ಪರಿಹರಿಸಿದರು ಹೇಗೆ ॥ 252

ಬಾಬಾ ಹೇಳಿದರು ಕುಳಿತು ಶಿರಡಿಯೊಳು । ಪಾರಲೆಗೆ ತಿರುಗಿ ನೀ ಹೋಗಲು ।
ಅಲ್ಲಿ ಕಾಕಾರ ಮನೆಯ ಕೆಲಸದಾಳು । ನಿನ್ನ ಶಂಕೆ ಕಳೆಯುವಳು ॥ 253

ಈಶಾವಾಸ್ಯ ಕಮಲದ ಸುತ್ತಲೂ । ಶಾರದೆ ಭ್ರಮರ ರೂಪದಲಿ ಸುತ್ತು ತಿರುವಳು ।
ಅದರ ಸುಗಂಧವ ಸವಿಯಲು । ಶ್ರೋತೃಗಳು ಅಣಿಯಾಗಬೇಕು ॥ 254

ಮುಂದಿನ ಅಧ್ಯಾಯದಲಿ ಬರುವ ಈ ಕಥನ । ಮಾಡುವ ಮಾಡಿಸುವವ ಸಾಯಿ ದಯಾಘನ ।
ಶ್ರೋತೃಗಳು ಮಾಡಲಿದರ ಶ್ರವಣ । ಬಹಳ ಕಲ್ಯಾಣ ಅವರದು ॥ 255

ಪಂತ ಹೇಮಾಡ ಸಾಯಿಗೆ ಶರಣ । ಅದರಂತೆ ಭೂತ ಮಾತ್ರಗಳು ಭಗವಂತನಲಿ ಲೀನ ।
ಶ್ರೋತೃಗಳೀಯಲಿ ಅವಧಾನದಾನ । ಸಾಯಿ ನಿವೇದನ ಸವಿ ಇದು ॥ 256

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಮದನುಗ್ರಹೋ ನಾಮ
ಏಕೋನವಿಂಶೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥